3028

ಪಂಚಾಂಗ ಗಣಿತ ಶಿರೋಮಣಿ

Δ:8627
33D9H

CC-0. Jangamwadi Math Collection. Digitized by eGangotri

Δ:8627 424
33D9H
Hollabasva Shastri
Panchanga ganitā
Shiromani.

CC-0. Jangamwadi Math Collection. Digitized by eGangotri

Δ18627
33D9H

424

SHRI JAGADGURU VISHWARADHYA JNANAMANDIR
(LIBRARY)
JANGAMAWADIMATH, VARANASI

*****

Please return this volume on or before the date last stamped
Overdue volume will be charged 1/- per day.

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

Δ 8627
33D9H

SRI JAGADGURU VISHWARADHYA
JNANA SIMHASAN JNANAMANDIR
LIBRARY.
Jangamwadi Math, VARANASI.
Acc. No. ~~3022~~ 424

CC-0. Jangamwadi Math Collection. Digitized by eGangotri

31
p

ಇದು ಒಳ್ಳೇ ಸಮಯ !   ಬಿಡಬೇಡಿರಿ ! !

ಪ್ರಸಿದ್ಧ ಪತ್ರಿಕೆ.

ಪಂಚಾಂಗ ಗಣಿತ ಶಿರೋಮಣಿ.

ಸಮಸ್ತರಿಗೂ ವಿನಯಪೂರ್ವಕ ಶೃತಪಡಿಸುವದೇನಂದರೆ,—ನಾನು ಇದು ವರಿಗೂ ತಿಥ್ಯಾದಿ ರವಿಚಾರ ಅಹಸ್ಸು ಮೊದಲಾದವುಗಳನ್ನು ಸುಲಭವಾಗಿ ಸಾಧಿಸಿಕೊಳ್ಳುವದಕ್ಕಾಗಿ ಬಹು ಶ್ರಮಪಟ್ಟು ತಿಥಿಚಿಂತಾಮಣಿ ಎಂಬ ಪಂಚಾಂಗ ಸಾಧನ ಸಾರಸಂಗ್ರಹವೆಂಬ ಗ್ರಂಥವನ್ನು ಕನ್ನಡವಾಗಿ ರಚಿಸಿ ಪ್ರಿಂಟುಮಾಡಿಸಿರುತ್ತೇನೆ. ಮತ್ತು ಇತರ ಗ್ರಹಚಾರಗಳು, ಗ್ರಹಣ ಮೊದಲಾದ ಗಣಿತಗಳ ಕ್ರಮವನ್ನು ಯಾವತ್ತು ಪಂಚಾಂಗದ ಫಲವಿಚಾರವನ್ನು ತಿಳಿದುಕೊಳ್ಳುವದಕ್ಕಾಗಿ ಅನೇಕ ಸಿದ್ಧಾಂತ ಗ್ರಂಥಗಳನ್ನು ಪರಿಶೋಧಿಸಿ 'ಪಂಚಾಂಗಗಣಿತ ಶಿರೋಮಣಿ' ಎಂಬ ಸಿದ್ಧಾಂತಗ್ರಂಥವನ್ನು ಸಪ್ರಮಾಣ ಶ್ಲೋಕಗಳಿಂದ ಕನ್ನಡ ತಾತ್ಪರ್ಯ ಸಹಿತವಾಗಿ ಗಣಿತೋದಹರಣೆಗಳನ್ನು ಕೊಟ್ಟು ಬಹು ಸುಲಭವಾಗಿ ತಿಳಿಯುವಂತೆ ತಯಾರುಮಾಡಿರುತ್ತೇನೆ. ಈ ಗ್ರಂಥದಲ್ಲಿ ತಿಥಿವಾರ ನಕ್ಷತ್ರಯೋಗಾದಿಗಳನ್ನು ದಿವಾರಾತ್ರಿ ಸಾಮಾನ್ಯ ಘಟಿಕಾದಿಗಳನ್ನು ಮಾಡುವ ಕ್ರಮ, ಗ್ರಹಚಾರಗಳು, ಚಂದ್ರಸೂರ್ಯರ ಗ್ರಹಣವನ್ನು ಗುಣಿಸುವ ಕ್ರಮ, ಗುರು ಶುಕ್ರರ ಮೌಢ್ಯಕಾಲವನ್ನು ಮಾಡುವಕ್ರಮ, ಚಂದ್ರಶೃಂಗೊನ್ನತಿಯನ್ನು ತಿಳಿಯುವ ಕ್ರಮ, ಅಧಿಕ ಮಾಸವನ್ನು ಮಾಡುವ ಕ್ರಮ, ನವನಾಯಕರು ಉಪನಾಯಕರನ್ನು ಮಾಡಿಕೊಳ್ಳುವ ಕ್ರಮ, ಆದಾಯ ಕ್ರಮ, ಕಂದಾಯವನ್ನು ಕೊಡುವಕ್ರಮ, ವರ್ಷಧಾನ್ಯಾದಿಗಳನ್ನು ಗುಣಿಸುವಕ್ರಮ, ಮಕರಸಂಕ್ರಮಣವನ್ನು ತಿಳಿಯುವಕ್ರಮ, ಮತ್ತು ೬೦ ಸಂವತ್ಸರಗಳ ಫಲ, ನವನಾಯಕರ ಫಲ, ಗ್ರಹಚಾರ ಫಲ, ಮಕರ ಸಂಕ್ರಮಣದ ಫಲ, ಮೇಷಸಂಕ್ರಾಂತಿ ಫಲ, ಅರ್ಘವಿಚಾರವು, ವರ್ಷಯೋಗ ಫಲವಿಚಾರ ಇನ್ನು ಅನೇಕ ಪಂಚಾಂಗದ ಫಲವಿಚಾರವನ್ನು ಸಂಪೂರ್ಣವಾಗಿ ಬರೆದಿರುತ್ತದೆ. ಈ ನೂತನ ಗ್ರಂಥವು ಕೆಲವು ದಿನಗಳಲ್ಲಿ ಪ್ರಿಂಟಾಗಿ ಪ್ರಚಾರಕ್ಕೆ ಬರುತ್ತದೆ. ಈ ಗ್ರಂಥವು ಪ್ರಿಂಟಾದನಂತರ ಇದರ ಕ್ರಯವನ್ನು ಪ್ರಕಟನೆ ಮೂಲಕ ತಿಳಿಯಪಡಿಸುತ್ತೇವೆ. ಅನಂತರ ಸಮಸ್ತರು ದರಖಾಸ್ತುಮಾಡಿರಿ.

CC-0. Jangamwadi Math Collection. Digitized by eGangotri

ವಿನಯಪೂರ್ವಕ ಸೂಚನೆ.

ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ಪಂಚಾಂಗ ಗಣಿತವು ಬಹು ಮರ್ಮವಾಗಿರುವದರಿಂದ ನಾನು ಸುಲಭವಾಗಿ ತಿಳಿಯುವದಕ್ಕೆ ಸಮಸ್ತ ಮರ್ಮಗಳನ್ನೆಲ್ಲಾ ಬಿಚ್ಚಿ ಉದಾಹರಣೆಗಳನ್ನು ಕೊಟ್ಟು ಬರೆದು ಇರುತ್ತೇನೆ. ಆದರಲ್ಲಿ ಏನಾದರೂ ಸಂಶಯಗಳು ಬಂದಲ್ಲಿ ಈ ಕೆಳಗಿನ ವಿಳಾಸಕ್ಕೆ ೧ ರೂಪಾಯಿ ಚಾರ್ಜು ರವಾನೆಮಾಡಿ ಪತ್ರದ್ವಾರಾ ತಿಳಿದುಕೊಳ್ಳಬಹುದು.

ವಿಳಾಸ:— ಮೇನೇಜರ್ ಟಿ. ಹೆಚ್. ಎಂ. ಅಂಡ್ ಕೊ.,

ಹರಪನಹಳ್ಳಿ, ಬಳ್ಳಾರಿ ಜಿಲ್ಲಾ.

ಪ್ರಸ್ತಾವನೆಯು.

ಇಚ್ಛಾಮಾತ್ರದಿಂದಲೇ ಚರಾಚರಾತ್ಮಕವಾದ ಸೃಷ್ಟಿಯಂ ಕಲ್ಪಿಸಿ ಒಹುನಿಮಕಾರದೊಡನೆ ಅದನ್ನು ಪಾಲಿಸಿ ಲಯಮಂ ಗೈಯುವದಕ್ಕೋಸ್ಕರ ಅಚಿಂತ್ಯವಾದ ಅನೇಕವಿಧ ಆಟಗಳನ್ನಾಡುವದರಲ್ಲಿ ರಮಣನಾಗಿದ್ದು ವಾತಾಂಬುಪರ್ಣಾಶನರಾಗಿ ತಪವನ್ನಾಚರಿಸುವ ಕಾರ್ಯದೋಳ್ ಅನಂತ ಯುಗಗಳನ್ನು ವ್ಯಯಮಾಡಿದಂಥ ತಪೋಧನರ ಕಣ್ಣುಗಳಮುಂದೆ ಸುಳಿಯದೇ ಭಕ್ತಾಭಿಮಾನಿ ಎಂಬ ಬಿರುದನ್ನಧಾರಣಮಾಡಿಪ ಶ್ರೀ ಗುರುಬಸವರಾಜೇಂದ್ರ ಮಹಸ್ವಾಮಿಯ ಚಾರುಚರಣಾರವಿಂದಗಳನ್ನು ಹಗಲಿರುಳು ಏಕಚಿತ್ತದೊಡನೆ ಧ್ಯಾನಿಸುತ್ತಾ ನಾನು ಈ ಸಿದ್ಧಾಂತಗ್ರಂಥವನ್ನು ಸ್ವದೇಶ ಬಾಂಧವರಿಗೆ ಚನ್ನಾಗಿತಿಳಿಯುವಂತೆ ಬರೆದಿರುತ್ತೇನೆ.

ಸಿದ್ಧಾಂತ ಗಣಿತಶಾಸ್ತ್ರವು ಬಹುಗಣಿತ ಸಂಕೇತಗಳಿಂದ ಮರ್ಮವಾಗಿದ್ದು ಗುರೋಪದೇಶವಿಲ್ಲದೆ ತಿಳಿಯದಿರುವದರಿಂದಲೂ ಅಂತಹ ಸುಲಭವಾಗಿ ತಿಳಿಯುವ ಗ್ರಂಥಗಳು ಇದುವರಿಗೂ ಪ್ರಿಂಟಾಗದೆ ಇರುವದರಿಂದಲೂ ಇತ್ತೀಚಿಗೆ ಗ್ರಹಲಾಘವ, ಗಣಕಾನಂದ, ಪಂಚಾಂಗಸಾಧನಸಾರ ವಗ್ಯೆರೆ ಗ್ರಂಥಗಳು ಇತರ ಭಾಷೆಯಿಂದ ಪ್ರಿಂಟಾಗಿದ್ದರೂ ಆದರಲ್ಲಿರುವ ಗಣಿತ ಮರ್ಮಗಳನ್ನು ತಿಳಿದುಕೊಳ್ಳಲಾರದೆ ಬಹುಕಡೆಯಲ್ಲಿ ಪಂಚಾಂಗವನ್ನು ಗುಣಿಸಿ ಪ್ರಚಾರಪಡಿಸುವದನ್ನು ಬಿಟ್ಟಿ

CC-0. Jangamwadi Math Collection. Digitized by eGangotri

ರುತ್ತಾರೆ. ಮತ್ತು ಕೆಲವರು ಪಂಚಾಂಗ ಗುಣಿಸುವದು ಬಹು ಕಷ್ಟವಾಗಿರುವದೆಂತಲೂ ಬಹು ಕಷ್ಟಪಟ್ಟು ಅಭ್ಯಾಸವನ್ನು ಮಾಡಿದರೆ ಕೆಲವುಭಾಗ ತಿಳಿಯುತ್ತದೆಂತ ಹೇಳುವದರಿಂದಲೂ ಬಹುಜನರು ಪಂಚಾಂಗ ಗುಣಿಸುವದನ್ನು ಬಿಟ್ಟು ನಿರಾಶರಾಗಿರುತ್ತಾರೆ. ಇದು ಅಲ್ಲದೆ ಎಲ್ಲಾ ಪಂಚಾಂಗಗಳಲ್ಲಿ ದೇಶಭೇದಾನುಸಾರವಾಗಿ ತಿಥ್ಯಾದಿ ಘಟಿಕಾದಿಗಳು ಸ್ವಲ್ಪ ವ್ಯತ್ಯಸ್ತಬೀಳುವದರಿಂದ ಅನೇಕರು ತುಂಬಾ ಆಲೋಚನೆಪಡುತ್ತಿರುವದರಿಂದ ನಾನು ಮೇಲ್ಕಂಡ ತೊಂದರೆಗಳನ್ನು ತಪ್ಪಿಸಬೇಕೆಂದು ಬಹು ಶ್ರಮಪಟ್ಟು ಅನೇಕ ಸಿದ್ಧಾಂತ ಗ್ರಂಥಗಳನ್ನು ಸಂಗ್ರಹಿಸಿ ಪರಿಶೋಧನೆಮಾಡಿ ಸ್ವದೇಶಕ್ಕೆ ಅನುಕೂಲವಾಗುವಂತೆ ತಿಥಿವಾರ, ನಕ್ಷತ್ರ, ಯೋಗಕರಣಗಳ ಘಟಿಕೆಗಳನ್ನು ಗಣಿತ ಪ್ರಯಾಸವಿಲ್ಲದೆ ಬಹು ಸುಲಭವಾಗಿ ಅನ್ಯರ ಸಹಾಯವಿಲ್ಲದೆ ತಿಳಿದುಕೊಳ್ಳುವಂತೆ ಪ್ರತಿಒಂದು ವಿಷಯಕ್ಕೂ ಗಣಿತದ ಉದಾಹರಣೆಗಳನ್ನು ಕೊಟ್ಟು ಕನ್ನಡ ವಚನರೂಪವಾಗಿ 'ತಿಥಿಚಿಂತಾಮಣಿ' ಎಂಬ ಪಂಚಾಂಗ ಸಾಧನಸಾರ ಸಂಗ್ರಹನೆಂಬ ಗ್ರಂಥವನ್ನು ರಚಿಸಿರುತ್ತೇನೆ. ಈ ಗ್ರಂಥದಲ್ಲಿ ಪದಕಗಳ ಮೇಲಿಂದ ತಿಥಿ, ವಾರ, ನಕ್ಷತ್ರ, ಯೋಗ, ಕರಣ, ಘಳಿಗೆ, ಘಳಗಳನ್ನು ಮಾಡಿಕೊಳ್ಳುವ ಕ್ರಮವನ್ನು ಬಹು ಸುಲಭೋಪಾಯವಾಗಿ ಬರೆದಿರುತ್ತೆ. ಈ ಗ್ರಂಥದಲ್ಲಿ ಹೇಳಿರುವ ತಿಥಿ, ನಕ್ಷತ್ರ, ಯೋಗ, ಪದಕಗಳ ಮೇಲಿಂದ ಸ್ವಲ್ಪಮಟ್ಟಿಗೆ ಓದು ಬರಹ ಬಂದವರು ಸಹ ಇತರರ ಸಹಾಯವಿಲ್ಲದಂತೆ ಒಂದು ಸಂವತ್ಸರದ ಹೊಸ ಪಂಚಾಂಗವನ್ನು ೧೫ ದಿವಸಗಳಲ್ಲಿ ಮಾಡಿಕೊಳ್ಳಬಹುದು. ತುಂಬಾ ಕಷ್ಟಪಟ್ಟು ಗಣಿತವನ್ನು ಮಾಡಿಕೊಳ್ಳುವ ಕೆಲಸವಿಲ್ಲ. ಮತ್ತು ಈ ಗ್ರಂಥದಲ್ಲಿ ಸೂರ್ಯನು ೨೭ ನಕ್ಷತ್ರ ೧೦೮ ಪಾದಪ್ರವೇಶ ವಾರ ಘಳಿಗೆ ಘಳಗಳನ್ನು ಗಣಿತವಿಲ್ಲದೆ ಪದಕಗಳ ಮೇಲಿಂದ ಬಹು ಸುಲಭವಾಗಿ ಮಾಡಿಕೊಳ್ಳುವ ಕ್ರಮವನ್ನು ಪದಕಗಳನ್ನು ಸಹಾ ಬರೆದಿರುತ್ತೆ. ಒಂದು ತಾಸಿನಲ್ಲಿ ಎಂಥವರಾದರೂ ಒಂದು ಸಂವತ್ಸರಕ್ಕೆ ಸೂರ್ಯಚಾರಗಳನ್ನು ಮಾಡಿಕೊಳ್ಳಬಹುದು. ಈ ಗ್ರಂಥವನ್ನು ಆದಿಯಿಂದ ಅಂತ್ಯದವರಿಗೂ ಬಿಡದೆ ಚನ್ನಾಗಿ ಇದರಲ್ಲಿರುವ ಸಂಜ್ಞೆಗಳನ್ನು ಜ್ಞಾಪಕದಲ್ಲಿಟ್ಟುಕೊಂಡು ಮಾಡಿದರೆ ಸುಲಭವಾಗಿ ತಿಳಿಯುತ್ತದೆ. ಇಂತಹ ಅಪೂರ್ವ ಪಂಚಾಂಗ ಗಣಿತ ಗ್ರಂಥವನ್ನು ಇದುವರಿಗೂ ಯಾಗೂ ಪ್ರಿಂಟುಮಾಡಿಸಿ ಪ್ರಚಾರಕ್ಕೆ ತರಲಿಲ್ಲಾ. ಸಮಸ್ತರಿಗೂ ಪಂಚಾಂಗ ಗಣಿತದ ಮರ್ಮವು ತಿಳಿಯಲೀ ಎಂದು ಲೋಕೋಪಕಾರಾರ್ಥವಾಗಿ ಸುಲಭ ಕ್ರಿಯ

CC-0. Jangamwadi Math Collection. Digitized by eGangotri

ವಿಟ್ಟು ಪ್ರಿಂಟು ಮಾಡಿಸಿರುತ್ತೇನೆ. ಈ ಗ್ರಂಥದಲ್ಲಿ ಬರೆಯುವ ಕಾಲದೊಳು ನನ್ನ ಪರಿಪೋಟನಿಂದಾಗಲಿ ಇತರ ಕಾರಣದಿಂದಾಗಲಿ ಗಣಿತದಲ್ಲಿಯೂ, ಕೋಷ್ಟಗಳಲ್ಲಿಯೂ, ತಪ್ಪಿತಗಳೇನಾದರೂ ಇದ್ದರೆ ಅದನ್ನು ಕ್ಷಮಿಸಿ ಗುಣಗ್ರಹಣವನ್ನು ಮಾಡಬೇಕೆಂದು ಸಿದ್ಧಾಂತಗಣಿತ ಶಾಸ್ತ್ರಜ್ಞರನ್ನು ಕುರಿತು ಪ್ರಾರ್ಥಿಸುತ್ತೇನೆ. ಎಲ್ಲಾದರೂ ಗಣಿತದಲ್ಲಿ ಸ್ವಲ್ಪ ವ್ಯತ್ಯಸ್ತವಿದ್ದರೆ ಅವುಗಳನ್ನು ಮಹಾನುಭಾವರು ದಯವಿಟ್ಟು ತಿಳಿಸಿದಲ್ಲಿ ಅವರ ಉಪಕಾರವನ್ನು ಸ್ಮರಿಸುತ್ತಾ ಮತ್ತೊಂದು ಸಾರಿ ಮುದ್ರಣಮಾಡಿಸುವ ಕಾಲದಲ್ಲಿ ತಿದ್ದಿ ಸರಿಪಡಿಸಿ ಪ್ರಿಂಟುಮಾಡಿಸುತ್ತೇನೆ. ಈ ಅಪೂರ್ವ ಗ್ರಂಥವು ಎಷ್ಟು ಖರ್ಚುಮಾಡಿದರೂ ದೊರೆಯಲಾರದು. ಈ ಗ್ರಂಥಗಳಿಗೆ ಮುಂಚಿತವಾಗಿಯೇ ಅನೇಕಜನರು ದರಖಾಸ್ತುದಾರರಾಗಿರುತ್ತಾರೆ. ಅಪೇಕ್ಷೆವುಳ್ಳವರು ಈ ಕೆಳಗಿನ ವಿಳಾಸದಾರರಿಗೆ ಬರೆದು ತರಿಸಿಕೊಳ್ಳಬಹುದು.

ಕ್ರಯ ಪ್ರತಿ ೧ಕ್ಕೆ ವಿ.ಪಿ. ಚಾರ್ಜು ಸೇರಿ ರೂ. ೧-೮-೦.

ವಿಳಾಸ:— ಜ್ಯೋತಿಸ್ಸಿದ್ಧಾಂತ ಶಾಸ್ತ್ರ ಪಾಠಶಾಲಾಧ್ಯಾಪಕರಾದ
ತೆಲಗಿ ಹರಪನಹಳ್ಳಿ ಮಠದ ಬ್ರಹ್ಮ|| ಶ್ರೀ|| ಸಿದ್ಧಾಂತಿ
ಹೊಳೆಬಸವಶಾಸ್ತ್ರಿಗಳು,
ಹರಪನಹಳ್ಳಿ, ಬಳ್ಳಾರಿ ಜಿಲ್ಲಾ.

ನೋಟೀಸು.

ಸಮಸ್ತ ಜನರಿಗೂ ಇದರಿಂದ ತಿಳಿಯಪಡಿಸುವದೇನಂದರೆ :—ಈ 'ತಿಥಿ ಚಿಂತಾಮಣಿ' ಎಂಬ ಪಂಚಾಂಗಸಾಧನ ಸಾರಸಂಗ್ರಹವೆಂಬ ಗ್ರಂಥವನ್ನು ಗೌರ್ನಮೆಂಟಿನವರ ಆಕ್ಟು ಪ್ರಕಾರ ರಿಜಿಸ್ಟ್ರ-ಕಾಪಿರೈಟು ಮಾಡಿಸಲ್ಪಟ್ಟಿರುತ್ತದೆ. ಕಾರಣ ಈ ಗ್ರಂಥವನ್ನು ಇತರರು ಪ್ರಿಂಟು ಮಾಡಿಸಬಾರದು. ಒಂದುವೇಳೆ ಮಾಡಿಸಿದರೆ ನಮ್ಮ ಲುಕ್ಸಾನಿಗೆ ಬಾಧ್ಯರಾಗುತ್ತಾರೆ. ಈ ಗ್ರಂಥದ ಹಕ್ಕು ವಿಶಿಷ್ಟವನ್ನು ಗ್ರಂಥಕರ್ತರು ತಮ್ಮ ವಶದಲ್ಲಿಟ್ಟುಕೊಂಡು ಇರುತ್ತಾರೆ, ಗ್ರಂಥಕರ್ತರ ಸೈನು ಮೊಹರು ಇಲ್ಲದೆ ಯಾರು ತೆಗೆದುಕೊಳ್ಳಬಾರದು.

ಗ್ರಂಥಕರ್ತರು.—ತೆಲಗಿ ಹರಪನಹಳ್ಳಿ ಮಠದ ಬ್ರ|| ಶ್ರೀ|| ಸಿದ್ಧಾಂತಿ
ಹೊಳೆಬಸವಶಾಸ್ತ್ರಿಗಳು.

CC-0. Jangamwadi Math Collection. Digitized by eGangotri

— ಹರಓಂ —

ತಿಥಿ ಚಿಂತಾಮಣಿ.

ಎಂಬ

ಪಂಚಾಂಗಸಾಧನಸಾರಸಂಗ್ರಹ ಗ್ರಂಥಪ್ರಾರಂಭಃ.

ಶ್ರೀ ಗುರುಕೊಟ್ಟೂರೇಶಾಯನಮಃ.

ವೃ|| ಶ್ರೀಮನ್ಮುಕ್ತಿರಮಾಮನೋಜ್ಞವದನಾಂಭೋಜಾಲಸೇಂದಿಂದಿರಂ |
ಕಾಮಧ್ವಾಂತದಿವಾಕರಂಶ್ರಿತಜನಾನಂದಾಬ್ಧಿಸಚ್ಚಂದಿರಂ ||
ಸೀಮಾತೀತಯಶೋಧರಂ ಹರಪುರೀಗದ್ದೀಮಠಾಧೀಶ್ವರಂ |
ಕಾಮಂಪೂರಿಕೆಸೋಮಶೇಖರಗುರೂತ್ತಂ ತನ್ನತರ್ಗೀಷ್ಟಮಂ || ೧ ||

ಶ್ಲೋ|| ವರಹರಪುರನಾಥೋವಾಂಛಿತಾರ್ಥಃಪ್ರದಾತಾ |
ಶಿವಪುರಪಥಪಾಂಥಪ್ರಾಣಪಾಥೇಯಮುಖ್ಯಃ ||
ವಿಧಿಸುರಪತಿವಂದ್ಯಃಪಾತುಗಂಗಾಧರೇಶಃ |
ಗುಣನಿವಹಸನಾಥೋವೇದವೇದಾಂತವೇದ್ಯಃ || ೨ ||

ವಾರ್ಧಿಕಷಟ್ಪದಿ || ವರವೀರಶೈವಸಮಯ ಸ್ಥಾಪನಾಚಾರ್ಯ | ಸುರುಚಿರೈಕೋರಾಮನಾಮ ಗುರುವಂಶಗತ || ಹರಪುರಸ್ಥಿತ ತೆಲಗಿಸಾಲೇಶ್ವರನ ಮಠಾಧ್ಯಕ್ಷತೆಯನಾಂತುಮೆರೆವಾ | ಪರಮ ಸದ್ಭಕ್ತಿತತ್ಪರ ಶಿವಸ್ವಾಚಾರ್ಯನುರತನೂಜಂ | ಹೊಳೆಯ ಬಸವಪ್ಪಶಾಸ್ತ್ರಿ ಯಾ | ಧರೆನಲಿಯೆ ಸದ್ಗುಣಾಕರನಾಗಿ ಶೋಭಿಸಂ | ಸಿದ್ಧಾಂತವಿದ್ಯಾಧರಂ ||೩||

ನಾವು ಯಾವ ಸಂವತ್ಸರಕ್ಕೆ ತಿಥಿ, ವಾರ, ನಕ್ಷತ್ರ, ಯೋಗಕರಣಗಳನ್ನು ಸಾಧಿಸಿಕೊಳ್ಳಬೇಕಾಗುತ್ತದೋ ಮೊದಲು ಆ ಸಂವತ್ಸರಕ್ಕೆ ಸರಿಯಾಗಿ ಸ್ವದೇಶ ಅಬ್ದಪ, ತಿಥಿ, ಧ್ರುವಕಿ, ನಕ್ಷತ್ರಯೋಗ ಧ್ರುವಕಿ, ತಿಥಿಸ್ಫಷ್ಟಕೇಂದ್ರ, ತಿಥಿಸ್ಫಷ್ಟ ಭೋಗ, ನಕ್ಷತ್ರಸ್ಫಷ್ಟಕೇಂದ್ರ, ನಕ್ಷತ್ರಸ್ಫಷ್ಟಭೋಗ, ನಕ್ಷತ್ರಸ್ಫಷ್ಟಭ ಭೋಗ, ಯೋಗಸ್ಫಷ್ಟಕೇಂದ್ರ, ಯೋಗಸ್ಫಷ್ಟಭೋಗ, ಇತ್ಯಾದಿ ಗಣಿತಗಳನ್ನು ಮಾಡಿ ಕೊಂಡನಂತರ ಮುಂದೆ ಬರೆದಿರುವ ಪದಕಗಳ ಮೇಲಿಂದ ತಿಥ್ಯಾದಿ, ಘಟಿಕಾ ದಿಗಳನ್ನು ಸಾಧಿಸಿಕೊಳ್ಳಬೇಕು.

CC-0. Jangamwadi Math Collection. Digitized by eGangotri

~~ಸ್ವದೇಶ~~ ಶುದ್ಧ ಅಬ್ದಪವನ್ನು ಮಾಡುವ ಕ್ರಮ.

ಆ ಸಂವತ್ಸರದ ಶಾಲಿವಾಹನ ಶಕವನ್ನು ಇಟ್ಟುಕೊಂಡು ಅದರಲ್ಲಿ ೧೪೪೭ ಸಂಖ್ಯೆಯನ್ನು ಕಳೆಯಬೇಕು. ಉಳಿದ ಸಂಖ್ಯೆಯೆ ಸಮೋಘವಾಗುತ್ತದೆ. ಆ ಸಮೋಘವನ್ನು ೨ ಪ್ರತಿ ಇಟ್ಟುಕೊಂಡು ೨ನೇ ಪ್ರತಿಯನ್ನು ೧೦೦೭ ರಿಂದ ಗುಣಿಸಿ ೮೦೦ರಿಂದ ಭಾಗಿಸಬೇಕು ಬಂದ ಲಬ್ಧವೆ ದಿನ. ಉಳಿದ ಶೇಷವನ್ನು ೬೦ ರಿಂದ ಗುಣಿಸಿ ೮೦೦ ರಿಂದ ಭಾಗಿಸಬೇಕು ಬಂದ ಲಬ್ಧವೆ ಘಳಿಗೆ. ಶೇಷವನ್ನು ೬೦ ರಿಂದ ಗುಣಿಸಿ ೮೦೦ ರಿಂದ ಭಾಗಿಸಬೇಕು. ಬಂದ ಲಬ್ಧವೇ ಫಳ. ಈ ಗಣಿತದಿಂದ ಬಂದ ದಿನ, ಘಳಿಗೆ ಫಳಗಳನ್ನು ಬೇರೆ ಇಟ್ಟುಕೊಳ್ಳಬೇಕು. ಪುನಃ ಸಮೋಘವನ್ನು ೪೩ ರಿಂದ ಭಾಗಿಸಬೇಕು. ಬಂದ ಲಬ್ಧವೇ ಫಳಗಳು ಈ ಫಳಗಳನ್ನೂ ಮತ್ತು ಧ್ರುವಕಿಯಾದ ೪-೪೫-೨೭ ನ್ನು ಬೇರೆ ಇಟ್ಟಿರುವ ದಿನ ಘಳಿಗೆ ಫಳಗಳಲ್ಲಿ ಕೂಡಿಸಿ ದಿನಗಳನ್ನೂ ಮಾತ್ರ ೭ ರಿಂದ ಭಾಗಿಸಬೇಕು. ಲಬ್ಧ ಪ್ರಯೋಜನವಿಲ್ಲ. ಶೇಷ, ದಿನ, ಘಳಿಗೆ ಫಳಗಳೇ ಶುದ್ಧವಾದ ಅಬ್ದಪವಾಗುತ್ತದೆ ಅನಂತರ ಸ್ವದೇಶ ಅಬ್ದಪವನ್ನು ಮಾಡಿಕೊಳ್ಳಬೇಕು.

ಶೋಭಾನುಕೃತು ಸಂವತ್ಸರಕ್ಕೆ ಉದಾಹರಣೆ.

ಶಾಲಿವಾಹನಶಕ ೧೮೨೫ ಇದರಲ್ಲಿ ೧೪೪೭ ನ್ನು ಕಳೆಯಲು ೩೭೮ ಉಳಿಯಿತು. ಇದೆ ಸಮೋಘವು ಇದನ್ನು ೧೦೦೭ ರಿಂದ ಗುಣಿಸಿದ ಮೊತ್ತ ೩೮೦,೬೪೬ ಇದನ್ನು ೮೦೦ ರಿಂದ ಭಾಗಿಸಲು ಬಂದ ಲಬ್ಧ ೪೭೫ ದಿನ. ಶೇಷ ೬೦ ರಿಂದ ಗುಣಿಸಿ ೮೦೦ ರಿಂದ ಭಾಗಿಸಲು ೪೮ ಘಳಿಗೆ ಲಬ್ಧವಾಯಿತು ಶೇಷವನ್ನು ೬೦ ರಿಂದ ಗುಣಿಸಿ ೮೦೦ ರಿಂದ ಭಾಗಿಸಲು ಬಂದ ಲಬ್ಧ ೨೭ ಫಳವಾಯಿತು. ಬಂದದ್ದು ೪೭೫-೪೮-೨೭ ಈ ದಿನಾದಿಗಳನ್ನು ಬೇರೆ ಇಡಬೇಕು. ಪುನಃ ಸಮೋಘ ೩೭೮ ನ್ನು ೪೩ ರಿಂದ ಭಾಗಿಸಲು ಬಂದ ಲಬ್ಧ ೮ ಫಳವನ್ನು ಧ್ರುವಕಿ ೪-೪೫-೨೭ ನ್ನು ಬೇರೆ ಇಟ್ಟಿರುವ ದಿನಾದಿಗಳಲ್ಲಿ ಕೂಡಿಸಿದರೆ ಆದದ್ದು ೪೮೦-೩೪-೨, ಇದರಲ್ಲಿ ಮೊದಲನೇ ದಿನ ಸಂಖ್ಯೆಯಾದ ೪೮೦ನ್ನು ೭ ರಿಂದ ಭಾಗಿಸಲು ಬಂದದ್ದು ಶೇಷ ೪, ಲಬ್ಧ ಕಾರಣವಿಲ್ಲ. ಬಂದ ದಿನ ೪-೩೪-೨ ಇದೇ ಶುದ್ಧ ಅಬ್ದಪವಾಯಿತು.

CC-0. Jangamwadi Math Collection. Digitized by eGangotri

ಸ್ವದೇಶ ಅಬ್ದಪವನ್ನು ಮಾಡುವ ಕ್ರಮ.

ನಮ್ಮ ದೇಶಕ್ಕೆ ಸೊಂಡೂರು ಹತ್ತರ ಇರುವ ಕುಮಾರಸ್ವಾಮಿ ಪರ್ವತವು ೫ ಯೋಜನ ಉಂಟು. ಈ ಯೋಜನ ಸಂಖ್ಯೆಯನ್ನು ೨ ಪ್ರತಿಯಿಟ್ಟು ಇದರಲ್ಲಿ ೧ ಪ್ರತಿಯನ್ನು ೪ ರಿಂದ ಭಾಗಿಸಬೇಕು. ಬಂದ ಲಬ್ಧ ಸಂಖ್ಯೆಯನ್ನು ಮತ್ತೊಂದು ಪ್ರತಿಯಲ್ಲಿ ಕಳೆಯಬೇಕು, ಉಳಿದಫಳಗಳನ್ನು ಹಿಂದೆ ಮಾಡಿಕೊಂಡ ಶುದ್ಧ ಅಬ್ದಪದ ಫಳದಲ್ಲಿ ಸಂಸ್ಕಾರ ಮಾಡಬೇಕು. ಹ್ಯಾಗಂದರೆ:—ಸ್ವದೇಶವು ಕುಮಾರಸ್ವಾಮಿ ಪರ್ವತಕ್ಕೆ ಪೂರ್ವದಿಕ್ಕಿನಲ್ಲಿ ಇದ್ದರೆ ಕೂಡಿಸಬೇಕು, ಪಶ್ಚಿಮ ದಿಕ್ಕಿನಲ್ಲಿ ಇದ್ದರೆ ಕಳೆಯಬೇಕು. ಇಲ್ಲಿ ನಮ್ಮ ಸ್ವಗ್ರಾಮವಾದ ಹರಪುರೀ ಪಟ್ಟಣವು ಪಶ್ಚಿಮ ದಿಕ್ಕಿನಲ್ಲಿ ಇದ್ದಕಾರಣ ಕಳೆಯಬೇಕಾಗುತ್ತದೆ. ಈ ಪ್ರಕಾರ ಮಾಡಲು ಸ್ವದೇಶ ಅಬ್ದಪವಾಗುತ್ತದೆ.

ಉದಾಹರಣೆ.

ದೇಶಾಂತರ ಯೋಜನ ೫ ಇದನ್ನು ೨ ಪ್ರತಿ ಇಟ್ಟು ಒಂದು ಪ್ರತಿ ೫ ನ್ನು ೪ ರಿಂದ ಭಾಗಿಸಲು ಬಂದ ಲಬ್ದ ೧, ಈ ೧ ದನ್ನು ಮತ್ತೊಂದು ಪ್ರತಿಯಾದ ೫ ರಲ್ಲಿ ಕಳೆಯಲು ೪ ದೇಶಾಂತರ ಫಳವಾಯಿತು. ಈ ೪ ಫಳವನ್ನು ಶುದ್ಧ ಅಬ್ದಪವಾದ ೪–೩೪–೨ ರಲ್ಲಿ ಕಳೆಯಲು ಮಿಕ್ಕದ್ದು ೪–೩೩–೫೮ ಆಯಿತು. ಇದೇ ಸ್ವದೇಶ ಅಬ್ದಪವು.

ತಿಥಿ ಧೃವಕಿಯನ್ನು ಮಾಡುವ ಕ್ರಮ.

ಹಿಂದೆ ಮಾಡಿಕೊಂಡ ಸಮೋಘವನ್ನು ೧೧ ರಿಂದ ಗುಣಿಸಿ ಬಂದ ಮೊತ್ತವನ್ನು ೨ ಪ್ರತಿಯಿಟ್ಟು ಅದರಲ್ಲಿ ೧ ಪ್ರತಿಯನ್ನು ೬೦೦೦ ಸಂಖ್ಯೆಯಿಂದ ಭಾಗಿಸಬೇಕು ಬಂದ ಲಬ್ಧವೇ ದಿನ. ಉಳಿದ ಶೇಷವನ್ನು ೬೦ ರಿಂದ ಗುಣಿಸಿ ೬೦೦೦ ದಿಂದ ಭಾಗಿಸಬೇಕು ಬಂದ ಲಬ್ದವೇ ಘಳಿಗೆ, ಉಳಿದ ಶೇಷವನ್ನು ೬೦ ರಿಂದ ಗುಣಿಸಿ ೬೦೦೦ ರಿಂದ ಭಾಗಿಸಬೇಕು ಬಂದ ಲಬ್ದವೇ ಫಳ. ಈ ಗಣಿತದಿಂದ ಬಂದ ದಿನ, ಘಳಿಗೆ ಫಳಗಳನ್ನು ಬ್ಯಾರೆ ಇಟ್ಟಿರುವ ಮತ್ತೊಂದು ಪ್ರತಿಯಲ್ಲಿ ಕಳೆಯಬೇಕು. ಉಳಿದ ದಿನಾದಿಗಳನ್ನು ಬ್ಯಾರೆ ಇಟ್ಟುಕೊಳ್ಳಬೇಕು. ಪುನಃ ಸಮೋಘ

CC-0. Jangamwadi Math Collection. Digitized by eGangotri

ವನ್ನು ೧೫೫ ರಿಂದ ಭಾಗಿಸಬೇಕು ಬಂದ ಲಬ್ಧವೆ ದಿನ. ಉಳಿದ ಶೇಷವನ್ನು ೬೦ ರಿಂದ ಗುಣಿಸಿ ೧೫೫ ರಿಂದ ಭಾಗಿಸಬೇಕು ಬಂದ ಲಬ್ಧವೆ ಘಳಿಗೆ. ಉಳಿದ ಶೇಷವನ್ನು ೬೦ರಿಂದ ಗುಣಿಸಿ ೧೫೫ ರಿಂದ ಭಾಗಿಸಬೇಕು ಬಂದ ಲಬ್ಧ ಘಳ. ಈ ಗಣಿತದಿಂದ ಬಂದ ದಿನಾದಿಗಳನ್ನು ಪ್ಯಾರೆ ಇಟ್ಟಿರುವ ದಿನಾದಿಗಳಲ್ಲಿ ಕೂಡಿಸಿ ಇದರಲ್ಲಿ ಧೃವಕಿಯಾದ ೫-೫೪-೨೪ನ್ನ ಕೂಡಿಸಬೇಕು. ಇದರಲ್ಲಿ ದಿನಗಳನ್ನು ಮಾತ್ರ ೩೦ ರಿಂದ ಭಾಗಿಸಬೇಕು. ಲಬ್ಧ ಕಾರಣವಿಲ್ಲಾ. ಉಳಿದ ಶೇಷ ದಿನ ಘಳಿಗೇ ಘಳಗಳೇ ತಿಥಿ ಶುದ್ಧಿಯಾಗುತ್ತದೆ. ಈ ತಿಥಿ ಶುದ್ಧಿಯ ದಿನಗಳನ್ನು ಬಿಟ್ಟು ಘಳಿಗೆ ಘಳಗಳನ್ನು ಮಾತ್ರ ೬೦ ರಲ್ಲಿ ಕಳೆಯಬೇಕು. ನಿಂತ ದಿನ ಘಳಿಗೆ ಘಲಗಳೇ ತಿಥಿ ಧೃವಕಿಯಾಗುತ್ತದೆ; ತಿಥಿ ಧೃವಕಿಯಂದರೆ:-ಆ ಸಂವತ್ಸರದ ಪ್ರಾರಂಭ ದಿನ ವೆಂದು ತಿಳಿದುಕೊಳ್ಳಬೇಕು. ತಿಥಿ ಧೃವಕಿಯಲ್ಲಿ ಎಷ್ಟು ದಿನಗಳು ಬಂದಿರು ತ್ತವೋ ಚೈತ್ರಮಾಸಾದಿ ಶುಕ್ಲಪಕ್ಷ ಪ್ರತಿಪದದಿನದಿಂದ ಅಷ್ಟು ತಿಥಿಗಳಮೇಲೆ ಹೊಸ ವರುಷ ಪ್ರಾರಂಭವಾಗುತ್ತದೆ; ಅಲ್ಲಿಂದ ಹೊಸ ವರುಷದ ತಿಥ್ಯಾದಿಗ ಳನ್ನು ಸಾಧಿಸಿಕೊಳ್ಳಬೇಕು. ತಿಥಿ ಧೃವಕಿಯ ದಿನದ ಹಿಂದಿನ ದಿವಸಗಳಲ್ಲಿ ಗತ ಸಂವತ್ಸರದ ಪದಕಗಳನ್ನು ತಿಥ್ಯಾದಿ ಸ್ಪಷ್ಟಕೇಂದ್ರಾದಿಗಳನ್ನು ಉಪಯೋಗಿಸಿಕೊ ಳ್ಳಬೇಕು. ಎಂದು ಸಂವತ್ಸರ ಪ್ರಾರಂಭವಾಗುತ್ತದೋ ಅಂದಿನಿಂದ ಹೊಸ ಸಂವ ತ್ಸರದ ತಿಥ್ಯಾದಿ ಕೇಂದ್ರಾದಿಗಳನ್ನು ಉಪಯೋಗಿಸಿಕೊಳ್ಳಬೇಕು.

ಉದಾಹರಣೆ.

ಸಮೋಘ ೩೭೭ ನ್ನು ೧೧ ರಿಂದ ಗುಣಿಸಿದ ಮೊತ್ತ ೪೧೫೪೭, ಇದನ್ನು ೨ ಪ್ರತಿಯಿಟ್ಟು ಒಂದು ಪ್ರತಿಯಾದ ೪೧೫೪೭ ನ್ನು ೬೦೦೦ ದಿಂದ ಭಾಗಿಸಲು ಬಂದ ಲಬ್ಧ ಸೊನ್ನೆಯಾಯಿತು. ಶೇಷ ೪೧೫೪೭ ನ್ನು ೬೦ ರಿಂದ ಗುಣಿಸಿ ೬೦೦೦ ದಿಂದ ಭಾಗಿಸಲು ಬಂದ ಲಬ್ಧ ೪೧ ಘಳಿಗೆ, ಶೇಷ ೩೪೭೦ ನ್ನು ೬೦ ರಿಂದ ಗು ಣಿಸಿ ೬೦೦೦ ದಿಂದ ಭಾಗಿಸಲು ಬಂದ ಲಬ್ಧ ೪೧ ಘಳ, ಬಂದದ್ದು ೦-೪೧-೩೪ ಈ ದಿನಾದಿಗಳನ್ನು ಮತ್ತೊಂದು ಪ್ರತಿಯಾದ ೪೧೫೪೭-೦-೦ ರಲ್ಲಿ ಕಳೆಯಲು ೪೧೫೪೭-೧೮-೨೬ ಆಯಿತು. ಇದನ್ನು ಪ್ಯಾರೆ ಇಟ್ಟು ಪುನಃ ಸಮೋಘ ೩೭೭ ನ್ನು ೧೫೫ ರಿಂದ ಭಾಗಿಸಲು ಬಂದ ಲಬ್ಧ ೨೫೫ ದಿನ. ಶೇಷವನ್ನು ೬೦ ರಿಂದ

CC-0. Jangamwadi Math Collection. Digitized by eGangotri

ಗುಣಿಸಿ ೧೫ ರಿಂದ ಭಾಗಿಸಲು ಬಂದ ಲಬ್ಧ ೧೨ ಘಳಿಗೆ ಈ ಶೇಷದಿಂದ ಘಳವು ಪೂಜೆಬರುತ್ತದೆ. ಈ ಗಣಿತದಿಂದ ಬಂದದ್ದು ೨೫-೧೨-೦ ಇದನ್ನು ಬ್ಯಾರೆ ಇಟ್ಟಿರುವ ೪೧೫೭-೧೮-೨೬ ರಲ್ಲಿ ಕೂಡಿಸಿದರೆ ೪೧೮೨-೩೦-೨೬ ಆಯಿತು. ಇದರಲ್ಲಿ ಧ್ರುವಕಿಯಾದ ೫-೫೪-೨೪ ನ್ನು ಕೂಡಿಸಲು ಬಂದದ್ದು ೪೧೮೮-೨೪-೫೦, ಇದರೊಳು ದಿನಸಂಖ್ಯೆಯಾದ ೪೧೮೮ ನ್ನು ಮಾತ್ರ ೩೦ ರಿಂದ ಭಾಗಿಸಬೇಕು. ಉಳಿದ ಶೇಷ ೧೮-೨೪-೫೦ ಆಯಿತು. ಇದೇ ತಿಥಿ ಶುದ್ಧಿಯು. ಇದರಲ್ಲಿ ದಿನಸಂಖ್ಯೆಯನ್ನು ಬಿಟ್ಟು ಘಳಿಗೆ ಘಳಗಳು ೨೪-೫೦ ನ್ನು ೬೦ ರಲ್ಲಿ ಉಳಿದದ್ದು ೩೫-೧೦ ; ಬಂದ ೧೮-೩೫-೧೦ ಇದೇ ಶೋಭಾನು ಕೃತು ಸಂವತ್ಸರದ ತಿಥಿ ಧ್ರುವಕಿಯಾಯಿತು. ಈ ತಿಥಿಧ್ರುವಕಿಯು ದಿನಗಳು ೧೮ ಇರುವದರಿಂದ ಚೈತ್ರ ಬ| ೩ ಗೆ; ಶೋಭಾನುಕೃತು ಸಂವತ್ಸರದ ಪ್ರಾರಂಭ ದಿನವಾಯಿತು. ಈ ಚೈತ್ರ ಬ| ೪ ಯಿಂದ ತಿಥ್ಯಾದಿ ಕೋಷ್ಟಕಗಳನ್ನು ಮಾಡಿ ಕೊಳ್ಳಬೇಕು.

ನಕ್ಷತ್ರ ಯೋಗದ ಧ್ರುವಕಿಯನ್ನು ಮಾಡುವ ಕ್ರಮ.

ಹಿಂದೆ ಮಾಡಿಕೊಂಡ ತಿಥಿ ಶುದ್ಧಿಯನ್ನು ೨ ಪ್ರತಿ ಇಟ್ಟುಕೊಂಡು ಅದ ರಲ್ಲಿ ಒಂದು ಪ್ರತಿಯನ್ನು ೧೦ ರಿಂದ ಭಾಗಿಸಬೇಕು. ಬಂದ ಲಬ್ಧ ದಿನ. ಉಳಿದ ಶೇಷವನ್ನು ೬೦ ರಿಂದ ಗುಣಿಸಿ ಮೇಲಿನ ಘಳಿಗೆಯನ್ನು ಕೂಡಿಸಿ ೧೦ ರಿಂದ ಭಾಗಿಸಬೇಕು, ಬಂದ ಲಬ್ಧವೆ ಘಳಿಗೆ. ಉಳಿದ ಶೇಷವನ್ನು ೬೦ ರಿಂದ ಗುಣಿಸಿ ಮೇಲಿನ ಘಳಗಳನ್ನು ಕೂಡಿಸಿ ೧೦ ರಿಂದ ಭಾಗಿಸಬೇಕು. ಬಂದ ಲಬ್ಧವೇ ಘಳ ಗಳು ಈ ಗಣಿತದಿಂದ ಬಂದ ದಿನಾದಿಗಳನ್ನು ಬ್ಯಾರೆ ಇಟ್ಟಿರುವ ಮತ್ತೊಂದು ಪ್ರತಿಯಲ್ಲಿ ಕಳೆಯಬೇಕು. ಉಳಿದ ದಿನಸಂಖ್ಯೆಯಲ್ಲಿ ಮಾತ್ರ ಧ್ರುವಕಿ ೧ ನ್ನು ಕೂಡಿಸಿ ಘಳಿಗೆ ಘಳಗಳನ್ನು ೬೦ ರಲ್ಲಿ ಕಳೆಯಬೇಕು. ಈ ರೀತಿಯಾಗಿ ಬಂದ ದಿನ, ಘಳಿಗೆ, ಘಳಗಳೇ ನಕ್ಷತ್ರಕ್ಕೂ, ಯೋಗಕ್ಕೂ ಧ್ರುವಕಿಯಾಗುತ್ತದೆ. ನಕ್ಷತ್ರ, ಯೋಗ, ಧ್ರುವಕಿ ಎಂದರೆ:-ಸಂವತ್ಸರ ಪ್ರಾರಂಭ ದಿನದ ನಕ್ಷತ್ರಯೋ ಗವು ಹೊರಡುವ ದಿನವೆಂತ ತಿಳಿಯಬೇಕು. ತಿಥಿಗೆ ನಕ್ಷತ್ರಯೋಗವು ೧ ದಿವಸ ಹಿಂದು ಮುಂದು ಬರುವದುಂಟು, ಅದನ್ನು ವಾರದಿಂದ ಸರಿಮಾಡಿಕೊಳ್ಳಬೇಕು.

CC-0. Jangamwadi Math Collection. Digitized by eGangotri

ಯಾವ ದಿವಸ ನಕ್ಷತ್ರಯೋಗದ ಪ್ರಾರಂಭ ದಿನವೊ ಅಲ್ಲಿಂದ ನಕ್ಷತ್ರಯೋಗದ ಪದಕಗಳನ್ನು ಮಾಡಿಕೊಂಡು, ಆ ವರುಷದ ನಕ್ಷತ್ರ ಯೋಗದ ಸ್ಪಷ್ಟಕೇಂದ್ರಾದಿಗಳನ್ನು ಉಪಯೋಗಿಸುತ್ತಾ ಘಳಿಗೆಗಳನ್ನು ಮಾಡಿಕೊಳ್ಳಬೇಕು.

ಉದಾಹರಣೆ.

ತಿಥಿ ಶುದ್ಧಿ ೧೮-೨೪-೫೦ ಇದನ್ನು ೨ ಪ್ರತಿ ಯಿಟ್ಟು ಒಂದು ಪ್ರತಿಯಾದ ೧೮-೨೪-೫೦ ನ್ನು ೧೦ ರಿಂದ ಭಾಗಿಸಲು ಬಂದದ್ದು ದಿನಾದಿ ೧-೫೦-೨೯ ಇದನ್ನು ಮತ್ತೊಂದು ಪ್ರತಿಯಾದ ೧೮-೨೪-೫೦ ರಲ್ಲಿ ಕಳೆಯಲು ಉಳಿದದ್ದು ೧೬-೩೪-೨೧ ಆಯಿತು. ದಿನಸಂಖ್ಯೆಯಲ್ಲಿ ೧ ನ್ನು ಕೂಡಿಸಿದರೆ ೧೭-೩೪-೨೧ ಆಯಿತು. ಘಳಿಗೆ ಫಳಗಳಾದ ೩೪--೨೧ ನ್ನು ೬೦ ರಲ್ಲಿ ಕಳೆಯಲು ಉಳಿದದ್ದು ೨೫-೩೯ ಆಯಿತು. ಈ ರೀತಿಯಾಗಿ ಮಾಡಿ ಬಂದದ್ದು ೧೭-೨೫-೩೯ ಇದೇ ನಕ್ಷತ್ರಯೋಗಕ್ಕು ಧ್ರುವಕಿಯು.

ತಿಥಿ ಮಧ್ಯ ಕೇಂದ್ರವನ್ನು ಮಾಡುವ ಕ್ರಮ.

ಸರ್ವೋಘವನ್ನು ೪ ರಿಂದ ಭಾಗಿಸಬೇಕು. ಬಂದ ಲಬ್ಧ ಕಾರಣವಿಲ್ಲಾ. ಉಳಿದ ಶೇಷವನ್ನು ೭ ರಿಂದ ಗುಣಿಸಿ ಬಂದ ಮೊತ್ತವನ್ನು ಬ್ಯಾರೆ ಇಟ್ಟುಕೊಳ್ಳುವದು, ಪುನಃ ಸರ್ವೋಘವನ್ನು ೬ ರಿಂದ ಭಾಗಿಸಬೇಕು, ಬಂದ ಲಬ್ಧವೆ ದಿನ. ಉಳಿದ ಶೇಷವನ್ನು ೬೦ ರಿಂದ ಗುಣಿಸಿ ೬ ರಿಂದ ಭಾಗಿಸಬೇಕು, ಬಂದ ಲಬ್ಧವೆ ಘಳಿಗೆ. ಉಳಿದ ಶೇಷವನ್ನು ೬೦ ರಿಂದ ಗುಣಿಸಿ ೬ ರಿಂದ ಭಾಗಿಸಬೇಕು, ಬಂದ ಲಬ್ಧವೆ ಫಳಗಳು. ಈ ಗಣಿತದಿಂದ ಬಂದ ದಿನಾದಿಗಳನ್ನು ಬ್ಯಾರೆ ಇಟ್ಟಿರುವ ದಿನಸಂಖ್ಯೆಯಲ್ಲಿ ಕೂಡಿಸಿ ಬ್ಯಾರೆ ಇರಿಸುವದು. ಮತ್ತು ಸರ್ವೋಘವನ್ನು ೩೨೧ ರಿಂದ ಭಾಗಿಸಬೇಕು. ಬಂದಲಬ್ಧವೆ ದಿನ, ಉಳಿದ ಶೇಷವನ್ನು ೬೦ ರಿಂದ ಗುಣಿಸಿ ೩೨೧ ರಿಂದ ಭಾಗಿಸಬೇಕು, ಬಂದ ಲಬ್ಧವೆ ಘಳಿಗೆ. ಉಳಿದ ಶೇಷವನ್ನು ೬೦ ರಿಂದ ಗುಣಿಸಿ ೩೨೧ ರಿಂದ ಭಾಗಿಸಬೇಕು, ಬಂದ ಲಬ್ಧವೆ ಫಳಗಳು. ಈ ಗಣಿತದಿಂದ ಬಂದ ದಿನಾದಿಗಳನ್ನು ಬ್ಯಾರೆ ಇರಿಸಿರುವ ದಿನಾದಿಗಳಲ್ಲಿ ಕಳೆಯಬೇಕು. ಉಳಿದ ದಿನ, ಘಳಿಗೆ ಫಳಗಳಲ್ಲಿ ಧ್ರುವಕಿಯಾದ ೪-೩೪-೧೫ನ್ನು

CC-0. Jangamwadi Math Collection. Digitized by eGangotri

ಕೂಡಿಸಬೇಕು. ಇದರೊಳು ದಿನಗಳನ್ನು ಮಾತ್ರ ೨೮ ರಿಂದ ಭಾಗಿಸಬೇಕು. ಉಳಿದ ಶೇಷ ದಿನಗಳನ್ನು ಇಟ್ಟುಕೊಳ್ಳುವದು. ಲಬ್ಧಕಾರಣವಿಲ್ಲಾ. ಉಳಿದ ದಿನ ಘಳಿಗೆ ಫಳಗಳೇ ತಿಥಿ ಮಧ್ಯಕೇಂದ್ರವಾಗುತ್ತದೆ.

ಉದಾಹರಣೆ.

ಸಮೋಘ ೩೭೮ ನ್ನು ೪ ರಿಂದ ಭಾಗಿಸಲು ಉಳಿದ ಶೇಷ ೨, ಇದನ್ನು ೭ ರಿಂದ ಗುಣಿಸಿದರೆ ಬಂದದ್ದು ೧೪, ಇದನ್ನು ಬ್ಯಾರೆಯಿಟ್ಟುಕೊಳ್ಳುವದು. ಮತ್ತು ಸಮೋಘ ೩೭೮ ನ್ನು ೬ ರಿಂದ ಭಾಗಿಸಲು ಬಂದಲಬ್ಧ ೬೩, ಶೇಷ ಪೂಜ್ಯೆ ಬಂದದ್ದರಿಂದ ಘಳಿಗೆ ಫಳಗಳನ್ನು ಮಾಡಿಕೊಳ್ಳಲಿಲ್ಲ. ಬಂದದಿನ ೬೩-೦-೦ ಇದನ್ನು ಬ್ಯಾರೆಯಿಟ್ಟಿರುವ ೧೪ ರಲ್ಲಿ ಕೂಡಿಸಲು ೭೭-೦-೦ ಆಯಿತು. ಇದನ್ನು ಮತ್ತೊಂದು ಸ್ಥಲದಲ್ಲಿಡುವದು. ಮತ್ತು ಸಮೋಘ ೩೭೮ ನ್ನು ೩೨೧ ರಿಂದ ಭಾಗಿಸಲು ಬಂದಲಬ್ಧ ೧ ದಿನ, ಶೇಷ ೫೭ ನ್ನು ೬೦ ರಿಂದ ಗುಣಿಸಿ ೩೨೧ ರಿಂದ ಭಾಗಿಸಲು ಬಂದಲಬ್ಧ ೧೦ ಘಳಿಗೆ, ಶೇಷ ೨೧೦ ನ್ನು ೬೦ ರಿಂದ ಗುಣಿಸಿ ೩೨೧ ರಿಂದ ಭಾಗಿಸಲು ಬಂದಲಬ್ಧ ೩೯ ಫಳ, ಬಂದದ್ದು ೧-೧೦-೩೯ ಇದನ್ನು ಮತ್ತೊಂದು ಸ್ಥಲದಲ್ಲಿಟ್ಟಿರುವ ೭೭-೦-೦ ರಲ್ಲಿ ಕಳೆಯಲು ಉಳಿದದ್ದು ೭೫-೪೯-೨೧ ಇದರಲ್ಲಿ ಧ್ರುವಕಿಯಾದ ೪-೩೪-೧೫ ನ್ನು ಕೂಡಿಸಲು ಬಂದದ್ದು ೮೦-೨೩-೩೬ ಇದರಲ್ಲಿ ದಿನಗಳಾದ ೮೦ ನ್ನು ೨೮ ರಿಂದ ಭಾಗಿಸಲು ಶೇಷ ದಿನ ೨೪. ಈ ಪ್ರಕಾರ ಬಂದದ್ದು ೨೪-೨೩-೩೬. ಇದೇ ತಿಥಿಮಧ್ಯಕೇಂದ್ರವು.

ನಕ್ಷತ್ರ ಮಧ್ಯ ಕೇಂದ್ರವನ್ನು ಮಾಡುವ ಕ್ರಮ.

ತಿಥಿಮಧ್ಯಕೇಂದ್ರವನ್ನು ೨ ಪ್ರತಿ ಇಟ್ಟು, ಆದರಲ್ಲಿ ೧ ಪ್ರತಿಯನ್ನು ೩೬ ರಿಂದ ಭಾಗಿಸಬೇಕು, ಬಂದಲಬ್ಧವೇ ದಿನಗಳು. ಉಳಿದ ಶೇಷವನ್ನು ೬೦ ರಿಂದ ಗುಣಿಸಿ ಮೇಲಿನ ಘಳಿಗೆಯನ್ನು ಕೂಡಿಸಿ ೩೬ ರಿಂದ ಭಾಗಿಸಬೇಕು, ಬಂದಲಬ್ಧವೇ ಘಳಿಗೆಗಳು. ಉಳಿದ ಶೇಷವನ್ನು ೬೦ ರಿಂದ ಗುಣಿಸಿ ಮೇಲಿನ ಫಳಗಳನ್ನು ಕೂಡಿಸಿ ೩೬ ರಿಂದ ಭಾಗಿಸಬೇಕು ಬಂದಲಬ್ಧವೇ ಫಳಗಳು. ಈ ಗಣಿತದಿಂದ ಬಂದ ದಿನಾದಿಗಳನ್ನು ೨ ನೇ ಪ್ರತಿಯಲ್ಲಿ ಕಳೆಯಬೇಕು. ಉಳಿದ ದಿನಾದಿಗಳೇ ನಕ್ಷತ್ರಮಧ್ಯಕೇಂದ್ರವಾಗುತ್ತದೆ.

CC-0. Jangamwadi Math Collection. Digitized by eGangotri

ಉದಾಹರಣೆ.

ತಿಥಿಮಧ್ಯಕೇಂದ್ರ ೨೪-೨೩-೩೬ ಇದನ್ನು ೨ ಪ್ರತಿಯಿಟ್ಟು, ೧ ಪ್ರತಿಯಾದ ೨೪-೨೩-೩೬ ನ್ನು ೩೬ ರಿಂದ ಭಾಗಿಸಲು ಬಂದ ಲಬ್ಧಪೂಜ್ಯ, ಉಳಿದ ಶೇಷ ೨೪ ನ್ನು ೬೦ ರಿಂದ ಮೇಲಿನ ೨೩ ಘಳಿಗೆಯನ್ನು ಕೂಡಿಸಿ ೩೬ ರಿಂದ ಭಾಗಿಸಲು ಬಂದಲಬ್ಧ ೪೦ ಘಳಿಗೆ, ಶೇಷ ೨೩ ನ್ನು ೬೦ ರಿಂದ ಗುಣಿಸಿ ಮೇಲಿನ ೩೬ ಫಳವನ್ನು ಕೂಡಿಸಿ ೩೬ ರಿಂದ ಭಾಗಿಸಲು ಬಂದಲಬ್ಧ ೩೯ ಫಳ, ಬಂದದ್ದು ೦-೪೦-೩೯ ಇದನ್ನು ೧ ನೇ ಪ್ರತಿಯಾದ ೨೪-೨೩-೩೬ ರಲ್ಲಿ ಕಳೆಯಲು ಉಳಿದದ್ದು ೨೩-೪೨-೫೭ ಇದೇ ನಕ್ಷತ್ರ ಮಧ್ಯಕೇಂದ್ರವು.

ಯೋಗ ಮಧ್ಯ ಕೇಂದ್ರವನ್ನು ಮಾಡುವಕ್ರಮ.

ತಿಥಿಮಧ್ಯಕೇಂದ್ರವನ್ನು ೨ ಪ್ರತಿಯಿಟ್ಟು, ೧ ಪ್ರತಿಯನ್ನು ೨೨ ರಿಂದ ಭಾಗಿಸಬೇಕು ಬಂದಲಬ್ಧವೇ ದಿನ. ಉಳಿದ ಶೇಷವನ್ನು ೬೦ ರಿಂದ ಗುಣಿಸಿ ೨೨ ರಿಂದ ಭಾಗಿಸಬೇಕು ಬಂದಲಬ್ಧವೇ ಘಳಿಗೆ. ಉಳಿದ ಶೇಷವನ್ನು ೬೦ ರಿಂದ ಗುಣಿಸಿ ೨೨ ರಿಂದ ಭಾಗಿಸಿಬೇಕು, ಬಂದಲಬ್ಧವೇ ಫಳ. ಈ ಗಣಿತದಿಂದ ಬಂದ ದಿನಾದಿಗಳನ್ನು ೨ ನೇ ಪ್ರತಿಯಲ್ಲಿ ಕೂಡಿಸಬೇಕು, ಬಂದದ್ದೇ ಯೋಗ ಮಧ್ಯ ಕೇಂದ್ರವಾಗುತ್ತದೆ.

ಉದಾಹರಣೆ.

ತಿಥಿಮಧ್ಯಕೇಂದ್ರ ೨೪-೨೩-೩೬ ಇದನ್ನು ೨ ಪ್ರತಿಯಿಟ್ಟು, ೧ ಪ್ರತಿಯಾದ ೨೪-೨೩-೩೬ ನ್ನು ೨೨ ರಿಂದ ಭಾಗಿಸಲು ಬಂದಲಬ್ಧ ೧ ದಿನ. ಶೇಷ ೨ ನ್ನು ೬೦ ರಿಂದ ಗುಣಿಸಿ ಮೇಲಿನ ೨೩ ಘಳಿಗೆಯನ್ನು ಕೂಡಿಸಿ ೨೨ ರಿಂದ ಭಾಗಿಸಲು ಬಂದಲಬ್ಧ ೬ ಘಳಿಗೆ. ಶೇಷ ೧೧ ನ್ನು ೬೦ ರಿಂದ ಗುಣಿಸಿ ಮೇಲಿನ ೩೬ ಫಳವನ್ನು ಕೂಡಿಸಿ ೨೨ ರಿಂದ ಭಾಗಿಸಲು ಬಂದಲಬ್ಧ ೩೧ ಫಳ. ಬಂದದ್ದು ೧-೬-೩೧ ಇದನ್ನು ಮೊದಲನೇ ಪ್ರತಿಯಾದ ೨೪-೨೩-೩೬ ರಲ್ಲಿ ಕೂಡಿಸಲು ಬಂದದ್ದು ೨೫-೩೦-೭ ಇದೇ ಯೋಗಮಧ್ಯಕೇಂದ್ರವು.

CC-0. Jangamwadi Math Collection. Digitized by eGangotri

ಶೋಭಾನುಕೃತು ಸಂ॥ ಕ್ಕೆ ಮಾಡಿದ ತಿಥ್ಯಾದಿ ಮಧ್ಯಕೇಂದ್ರಗಳು.

ತಿಥಿ ಮಧ್ಯಕೇಂದ್ರ ೨೪-೨೩-೩೬. ನಕ್ಷತ್ರ ಮಧ್ಯಕೇಂದ್ರ ೨೩-೪೨-೫೭

ಯೋಗ ಮಧ್ಯಕೇಂದ್ರ ೨೫-೩೦-೭.

ತಿಥಿ ಸ್ಫಷ್ಟ ಕೇಂದ್ರವನ್ನು ಮಾಡುವ ಕ್ರಮ:

ತಿಥಿ ಮಧ್ಯಕೇಂದ್ರದಲ್ಲಿ ಹಿಂದೆ ಮಾಡಿದ ತಿಥಿ ಧ್ರುವಕಿಯ ದಿನಗಳನ್ನು ಬಿಟ್ಟು, ಘಳಿಗೆ ಫಳಗಳನ್ನು ಕೂಡಿಸಿದರೆ ತಿಥಿ ಸ್ಫಷ್ಟಕೇಂದ್ರವಾಗುತ್ತದೆ. ತಿಥಿ ಮಧ್ಯಕೇಂದ್ರ ೨೪-೨೩-೩೬ ಇದರಲ್ಲಿ ತಿಥಿ ಧ್ರುವಕಿಯ ಘಳಿಗೆ ೩೫-೧೦ ನ್ನು ಕೂಡಿಸಲು ೨೪-೫೮-೪೬ ಇದೇ ತಿಥಿ ಸ್ಫಷ್ಟಕೇಂದ್ರವು.

ನಕ್ಷತ್ರ ಸ್ಫಷ್ಟಕೇಂದ್ರವನ್ನು ಮಾಡುವಕ್ರಮ.

ನಕ್ಷತ್ರ ಮಧ್ಯಕೇಂದ್ರದಲ್ಲಿ ಹಿಂದೆ ಮಾಡಿಕೊಂಡ ನಕ್ಷತ್ರ ಧ್ರುವಕಿಯ ದಿನಗಳನ್ನು ಬಿಟ್ಟು, ಘಳಿಗೆ ಫಳಗಳನ್ನು ಕೂಡಿಸಿದರೆ ನಕ್ಷತ್ರ ಸ್ಫಷ್ಟಕೇಂದ್ರವಾಗುತ್ತದೆ. ಉದಾ- ನಕ್ಷತ್ರ ಮಧ್ಯಕೇಂದ್ರ ೨೩-೪೨-೫೭ ಇದರಲ್ಲಿ ನಕ್ಷತ್ರ ಧ್ರುವಕಿ ಘಳಿಗೆ ೨೫-೩೯ ನ್ನು ಕೂಡಿಸಲು ೨೪-೮-೩೬, ಇದೇ ನಕ್ಷತ್ರ ಸ್ಫಷ್ಟಕೇಂದ್ರವು.

ಯೋಗ ಸ್ಫಷ್ಟಕೇಂದ್ರವನ್ನು ಮಾಡುವ ಕ್ರಮ.

ಯೋಗ ಮಧ್ಯಕೇಂದ್ರದಲ್ಲಿ ಯೋಗ ಧ್ರುವಕಿಯ ದಿನಗಳನ್ನು ಬಿಟ್ಟು ಘಳಿಗೆ ಫಳಗಳನ್ನು ಕೂಡಿಸಿದರೆ ಯೋಗ ಸ್ಫಷ್ಟಕೇಂದ್ರವಾಗುತ್ತದೆ. ಉದಾ- ಯೋಗ ಮಧ್ಯಕೇಂದ್ರ ೨೫-೩೦-೭ ಇದರಲ್ಲಿ ಯೋಗ ಧ್ರುವಕಿಯ ಘಳಿಗೆ ೨೫-೩೯ ನ್ನು ಕೂಡಿಸಲು ಬಂದದ್ದು ೨೫-೫೫-೪೬ ಇದೇ ಯೋಗ ಸ್ಫಷ್ಟಕೇಂದ್ರವು.

ಶೋಭಾನುಕೃತು ಸಂವತ್ಸರಕ್ಕೆ ಮಾಡಿದ ತಿಥ್ಯಾದಿ ಸ್ಫಷ್ಟಕೇಂದ್ರಗಳು.

ತಿಥಿ ಸ್ಫಷ್ಟಕೇಂದ್ರ ೨೪-೫೮-೪೬. ನಕ್ಷತ್ರ ಸ್ಫಷ್ಟಕೇಂದ್ರ ೨೪-೮-೩೬.

ಯೋಗ ಸ್ಫಷ್ಟಕೇಂದ್ರ ೨೫-೫೫-೪೬.

CC-0. Jangamwadi Math Collection. Digitized by eGangotri

ತಿಥಿ ಭೋಗವನ್ನು ಮಾಡುವ ಕ್ರಮ.

ತಿಥಿ ಧ್ರುವಕಿಯ ದಿನಗಳನ್ನು ಬಿಟ್ಟು, ಘಳಿಗೆ ಫಳಗಳನ್ನು ೨ ಪ್ರತಿಯಾಗಿ ಇಟ್ಟುಕೊಂಡು ಅದರಲ್ಲಿ ೧ ಪ್ರತಿಯನ್ನು ೬೪ ರಿಂದ ಭಾಗಿಸಬೇಕು. ಬಂದಲಬ್ಧವೇ ಘಳಿಗೆಗಳು. ಉಳಿದ ಶೇಷವನ್ನು ೬೦ ರಿಂದ ಗುಣಿಸಿ ಮೇಲಿನ ಫಳಗಳನ್ನು ಕೂಡಿಸಿ ೬೪ ರಿಂದ ಭಾಗಿಸಬೇಕು. ಬಂದಲಬ್ಧವೇ ಫಳಗಳು. ಈ ಗಣಿತದಿಂದ ಬಂದ ಘಳಿಗೆ ಫಳಗಳನ್ನು ಮತ್ತೊಂದು ಪ್ರತಿಯಲ್ಲಿ ಕಳೆಯಬೇಕು. ಉಳಿದ ಘಳಿಗೆ ಫಳಗಳನ್ನು ಹಿಂದೆ ಮಾಡಿಕೊಂಡ ಸ್ವದೇಶ ಅಬ್ದಪದಲ್ಲಿ ಕೂಡಿಸಿದರೆ ತಿಥಿ ಭೋಗವಾಗುತ್ತದೆ.

ಉದಾಹರಣೆ.

ತಿಥಿ ಧ್ರುವಕಿ ೧೮-೩೫-೧೦ ಇದರಲ್ಲಿ ದಿನಗಳನ್ನು ಬಿಟ್ಟು, ಘಳಿಗೆ ಫಳಗಳು ೩೫-೧೦-೬೪ ರಿಂದ ಭಾಗಿಸಲು ಬಂದಲಬ್ಧ ಸೊನ್ನೆಯಾಯಿತು. ಶೇಷ ೩೫ ನ್ನು ೬೦ ರಿಂದ ಗುಣಿಸಿ ಮೇಲಿನ ೧೦ ಫಳಗಳನ್ನು ಕೂಡಿಸಿದ ಮೊತ್ತ ೨೧೧೦ ಇದನ್ನು ೬೪ ರಿಂದ ಭಾಗಿಸಲು ಬಂದಲಬ್ಧ ಫಳ ೩೨ ಬಂದದ್ದು ೦-೩೨ ಇದನ್ನು ಮತ್ತೊಂದು ಪ್ರತಿಯಾದ ೩೫-೧೦ ರಲ್ಲಿ ಕಳೆಯಲು; ೩೪-೩೮ ಆಯಿತು, ಈ ಘಳಿಗೆ ಫಳಗಳಾದ ೩೪-೩೮ ನ್ನು ಸ್ವದೇಶ ಅಬ್ದಪವಾದ ೪-೩೩-೫೮ ರಲ್ಲಿ ಕೂಡಿಸಿದರೆ ಬಂದದ್ದು ೫-೮-೩೬ ಇದೇ ತಿಥಿ ಭೋಗವಾಯಿತು.

ನಕ್ಷತ್ರ ಭೋಗವನ್ನು ಮಾಡುವ ಕ್ರಮ.

ನಕ್ಷತ್ರ ಧ್ರುವಕಿಯ ಘಳಿಗೆ ಫಳಗಳನ್ನು ೨ ಪ್ರತಿಯಿಟ್ಟುಕೊಂಡು ೧ ಪ್ರತಿಯನ್ನು ೮೪ ರಿಂದ ಭಾಗಿಸಬೇಕು, ಬಂದಲಬ್ಧವೇ ಘಳಿಗೆ. ಉಳಿದ ಶೇಷವನ್ನು ೬೦ ರಿಂದ ಗುಣಿಸಿ ಮೇಲಿನ ಫಳಗಳನ್ನು ಕೂಡಿಸಿ ೮೪ ರಿಂದ ಭಾಗಿಸಬೇಕು ಬಂದ ಲಬ್ಧವೇ ಫಳಗಳು. ಈ ಗಣಿತದಿಂದ ಬಂದ ಘಳಿಗೆ ಫಳಗಳನ್ನು ೨ ನೇ ಪ್ರತಿಯಲ್ಲಿ ಕೂಡಿಸಬೇಕು. ಬಂದ ಘಳಿಗೆ ಫಳಗಳನ್ನು ಸ್ವದೇಶ ಅಬ್ದಪದಲ್ಲಿ ಕೂಡಿಸಿದರೆ ನಕ್ಷತ್ರ ಭೋಗವಾಗುತ್ತದೆ.

CC-0. Jangamwadi Math Collection. Digitized by eGangotri

ಉದಾಹರಣೆ.

ನಕ್ಷತ್ರಧ್ರುವಕಿ ೧೭-೨೫-೩೯ ಇದರಲ್ಲಿ ದಿನಗಳನ್ನು ಬಿಟ್ಟು ಘಳಿಗೆ ಘಳಗಳಾದ ೨೫-೩೯ ನ್ನು ೨ ಪ್ರತಿಯಿಟ್ಟು ೧ ಪ್ರತಿಯಾದ ೨೫-೩೯ ನ್ನು ೮೪ ರಿಂದ ಭಾಗಿಸಲು ಬಂದಲಬ್ಧ ಘಳಿಗೆ ಸೊನ್ನೆಯಾಯಿತು. ಶೇಷ ೨೫ ನ್ನು ೬೦ ರಿಂದ ಗುಣಿಸಿ ಮೇಲಿನ ಘಳ ೩೯ ನ್ನು ಕೂಡಿಸಿದ ಮೊತ್ತ ೧೫೩೯ ಇದನ್ನು ೮೪ ರಿಂದ ಭಾಗಿಸಲು ಬಂದಲಬ್ಧ ಘಳ ೧೮ ಬಂದದ್ದು ೦-೧೮ ಇದನ್ನು ಮತ್ತೊಂದು ಪ್ರತಿಯಾದ ೨೫--೩೯ ರಲ್ಲಿ ಕೂಡಿಸಲು ಬಂದದ್ದು ೨೫-೫೭ ಆಯಿತು. ಈ ೨೫-೫೭ ನ್ನು ಸ್ವದೇಶ ಅಬ್ದಪವಾದ ೪-೩೩-೫೮ ರಲ್ಲಿ ಕೂಡಿಸಲು ೪-೫೯-೫೫ ಆಯಿತು, ಇದೇ ನಕ್ಷತ್ರ ಭೋಗವಾಯಿತು.

ನಕ್ಷತ್ರ ಭ ಭೋಗವನ್ನು ಮಾಡುವ ಕ್ರಮ.

ನಕ್ಷತ್ರ ಸ್ಪಷ್ಟಕೇಂದ್ರ ದಿನಗಳನ್ನು ಮಾತ್ರ ೨ ಪ್ರತಿಯಿಟ್ಟುಕೊಂಡು ಅದರಲ್ಲಿ ೧ ಪ್ರತಿಯನ್ನು ೮೪ ರಿಂದ ಭಾಗಿಸಬೇಕು. ಬಂದಲಬ್ಧವೇ ದಿನ. ಉಳಿದ ಶೇಷವನ್ನು ೬೦ ರಿಂದ ಗುಣಿಸಿ ೮೪ ರಿಂದ ಭಾಗಿಸಬೇಕು. ಬಂದಲಬ್ಧವೇ ಘಳಿಗೆ. ಉಳಿದ ಶೇಷವನ್ನು ೬೦ ರಿಂದ ಗುಣಿಸಿ ೮೪ ರಿಂದ ಭಾಗಿಸಬೇಕು ಬಂದಲಬ್ಧವೇ ಘಳ. ಈ ಗಣಿತದಿಂದ ಬಂದ ದಿನಾದಿಗಳನ್ನು ೨ ನೇ ಪ್ರತಿಯಲ್ಲಿ ಕೂಡಿಸಿ ಬಂದ ದಿನಗಳನ್ನು ಮಾತ್ರ ೭ ರಿಂದ ಭಾಗಿಸಬೇಕು ಲಬ್ಧ ಕಾರಣವಿಲ್ಲ. ಉಳಿದ ಶೇಷ ದಿನ, ಘಳಿಗೆ, ಘಳಗಳನ್ನು ನಕ್ಷತ್ರಭೋಗ, ದಿನ, ಘಳಿಗೆ ಘಳಗಲ್ಲಿ ತೆಗೆದು ಹಾಕಬೇಕು. ಉಳಿದ ದಿನ, ಘಳಿಗೆ, ಘಳಗಳೇನಕ್ಷತ್ರ ಭ ಭೋಗವಾಗುತ್ತದೆ.

ಉದಾಹರಣೆ.

ನಕ್ಷತ್ರ ಸ್ಫಷ್ಟಕೇಂದ್ರ ೨೪-೮-೩೭ ಇದರಲ್ಲಿ ದಿನಗಳಾದ ೨೪ ನ್ನು ೨ ಪ್ರತಿಯಿಟ್ಟು ಅದರಲ್ಲಿ ೧ ಪ್ರತಿಯಾದ ೨೪ ನ್ನು ೮೪ ರಿಂದ ಭಾಗಿಸಲು ಬಂದಲಬ್ಧ ದಿನಾದಿ ೦-೧೭-೮ ಇದನ್ನು ೨ ಪ್ರತಿಯಾದ ೨೪ ರಲ್ಲಿ ಕೂಡಿಸಲು ೨೪-೧೭-೮ ಆಯಿತು. ಇದರೊಳು ದಿನ ೨೪ ನ್ನು ಮಾತ್ರ ೭ ರಿಂದ ಭಾಗಿಸಲು

CC-0. Jangamwadi Math Collection. Digitized by eGangotri

ಶೇಷ ೩ ಬಂದದ್ದು. ೩-೧೭-೮ ಈ ದಿನಾದಿಗಳನ್ನು ನಕ್ಷತ್ರ ಸ್ಫಷ್ಟಭೋಗ ೪-೫೯-೫೫ ರಲ್ಲಿ ಕಳೆಯಲು ಉಳಿದದ್ದು ೧-೪೨-೪೭ ಇದೇ ನಕ್ಷತ್ರ ಸ್ಫಷ್ಟ ಭ ಭೋಗವಾಯಿತು.

ಯೋಗ ಭೋಗವನ್ನು ಮಾಡುವ ಕ್ರಮ.

ಹಿಂದೆ ಮಾಡಿಕೊಂಡ ಯೋಗಧ್ರುವಕಿಯ ಘಳಿಗೆ ಫಳಗಳನ್ನು ೨ ಪ್ರತಿಯಿಟ್ಟುಕೊಂಡು, ಅದರಲ್ಲಿ ಮೊದಲನೇ ಪ್ರತಿಯನ್ನು ೧೭ ರಿಂದ ಭಾಗಿಸಬೇಕು ಬಂದಲಬ್ಧ ಘಳಿಗೆ. ಉಳಿದ ಶೇಷವನ್ನು ೬೦ ರಿಂದ ಗುಣಿಸಿ ಮೇಲಿನ ಫಳಗಳನ್ನು ಕೂಡಿಸಿ ೧೭ ರಿಂದ ಭಾಗಿಸಬೇಕು, ಬಂದಲಬ್ಧವೇ ಫಳಗಳು. ಈ ಗಣಿತದಿಂದ ಬಂದ ಘಳಿಗೆ ಫಳಗಳನ್ನು ೨ ನೇ ಪ್ರತಿಯಲ್ಲಿ ಕಳೆಯಬೇಕು. ಉಳಿದ ಘಳಿಗೆ ಫಳಗಳನ್ನು ಹಿಂದೆ ಮಾಡಿಕೊಂಡ ಸ್ವದೇಶ ಅಬ್ದಪದಲ್ಲಿ ಕೂಡಿಸಬೇಕು. ಬಂದದ್ದೆ ಯೋಗ ಭೋಗವಾಗುತ್ತದೆ.

ಉದಾಹರಣೆ.

ಯೋಗ ಧ್ರುವಕಿ ೧೭-೨೫-೩೯ ಇದರಲ್ಲಿ ಘಳಿಗೆ ಫಳಗಳಾದ ೨೫-೩೯ ನ್ನು ೨ ಪ್ರತಿಯಿಟ್ಟು ೧ ಪ್ರತಿಯಾದ ೨೫-೩೯ ನ್ನು ೧೭ ರಿಂದ ಭಾಗಿಸಲು ಬಂದದ್ದು ೧-೩ ಇದನ್ನು ಮತ್ತೊಂದು ಪ್ರತಿಯಾದ ೨೫-೩೯ ರಲ್ಲಿ ಕಳೆಯಲು ಬಂದದ್ದು ೨೪-೯ ಇದನ್ನು ಸ್ವದೇಶ ಅಬ್ದಪವಾದ ೪-೩೩-೫೮ ರಲ್ಲಿ ಕೂಡಿಸಲು ಬಂದದ್ದು ೪-೫೮-೭ ಇದೇ ಯೋಗ ಭೋಗವಾಯಿತು.

ಶೋಭಾನುಕೃತು ಸಂ॥ ಕ್ಕೆ ಮಾಡಿಕೊಂಡ ತಿಥ್ಯಾದಿ ಧ್ರುವಕಿ ಸ್ಫಷ್ಟಕೇಂದ್ರಾದಿಗಳು.

ತಿಥಿ ಧ್ರುವಕಿ ೧೮-೩೫-೧೦.
ನಕ್ಷತ್ರ ಧ್ರುವಕಿ ೧೭-೨೫-೩೯.
ಯೋಗ ಧ್ರುವಕಿ ೧೭-೨೫-೩೯.
ತಿಥಿ ಸ್ಫಷ್ಟಕೇಂದ್ರ, ೨೪-೫೮-೪೬.
ತಿಥಿ ಭೋಗ ೫-೮-೩೬.

ನಕ್ಷತ್ರ ಸ್ಫಷ್ಟಕೇಂದ್ರ ೨೪-೮-೩೬.
ನಕ್ಷತ್ರ ಭೋಗ ೪-೫೯-೫೫.
ನಕ್ಷತ್ರ ಭ ಭೋಗ ೧-೪೨-೪೭
ಯೋಗ ಸ್ಫಷ್ಟಕೇಂದ್ರ ೨೫-೫೫-೪೬
ಯೋಗ ಭೋಗ ೪-೫೮-೭.

CC-0. Jangamwadi Math Collection. Digitized by eGangotri

ತಾನು ಯಾವ ಸಂವತ್ಸರದ ಪಂಚಾಂಗವನ್ನು ಗುಣಿಸ ಬೇಕಾಗುತ್ತದೋ ಆ ಸಂವತ್ಸರಕ್ಕೆ ಸರಿಯಾಗಿ ಮೇಲೆ ಮಾಡಿಕೊಂಡ ಪ್ರಕಾರ; ತಿಥ್ಯಾದಿ ಧ್ರುವಕಿ, ಸ್ಫಷ್ಟಕೇಂದ್ರ ಭೋಗಾದಿಗಳನ್ನು ಮಾಡಿಕೊಂಡು ಅನಂತರ ತಿಥಿ, ನಕ್ಷತ್ರ, ಯೋಗಗಳ ಪದಕಗಳನ್ನು ತೆಗೆದು ಘಟಿಕಾದಿಗಳನ್ನು ಸಾಧಿಸಿಕೊಳ್ಳಬೇಕು.

ತಿಥ್ಯಾದಿ ಪದಕಗಳ ಸಂಖ್ಯೆ ಕ್ರಮ.

ಈ ಗ್ರಂಥದಲ್ಲಿ ೩೯೮ ತಿಥಿ ಪದಕಗಳು; ೩೯೧ ನಕ್ಷತ್ರ ಪದಕಗಳು; ೩೯೮ ಯೋಗ ಪದಕಗಳು ಇರುತ್ತವೆ. ತಿಥಿಯೋಗ ಪದಕಗಳಲ್ಲಿ ಪರಾಖ್ಯ ಪದಕಗಳುಂಟು. ನಕ್ಷತ್ರ ಪದಕಗಳಲ್ಲಿ ಪರಾಖ್ಯ ಪದಕಗಳಿಲ್ಲಾ, ಪದಕಗಳನ್ನು ತೆಗಿಯುವ ಕ್ರಮವನ್ನು ಮುಂದೆ ವಿಶದವಾಗಿ ಬರೆದು ಇರುತ್ತೆ.

ತಿಥಿ ಪದಕವನ್ನು ತೆಗಿಯುವ ಕ್ರಮ.

ನಾವು ಯಾವ ದಿವಸಕ್ಕೆ ತಿಥಿ ಪದಕ ಸಂಖ್ಯೆಯನ್ನು ತೆಗೆಯಬೇಕಾಗಿರುತ್ತದೋ ಆ ದಿವಸಕ್ಕೆ ಚೈತ್ರಮಾಸಾದಿ ಗತವಾದ ತಿಥಿಗಳು ಎಷ್ಟಾಗುತ್ತವೋ ಲೆಖ್ಖಮಾಡಿ ತಾನುಮಾಡುವ ತಿಥಿವರಿಗೂ ಕೂಡಿಸಿದ ಸಂಖ್ಯೆಯಲ್ಲಿ ತಿಥಿ ಧ್ರುವಕಿಯ ದಿನಗಳನ್ನು ಮಾತ್ರ ಕಳೆಯಬೇಕು, ಉಳಿದ ಸಂಖ್ಯೆಯೇ ಆ ದಿವಸಕ್ಕೆ ಸರಿಯಾಗಿ ತಿಥಿ ಪದಕ ಸಂಖ್ಯೆಯಾಗುತ್ತದೆ.

ಉದಾಹರಣೆ.

ಶೋಭಾನುಕೃತು ಸಂವತ್ಸರದ ಶ್ರಾವಣ ಬ|| ೫ ಗುರುವಾರಕ್ಕೆ
ತಿಥಿ ಪದಕವನ್ನು ತೆಗದಿರುತ್ತೆ.

ಚೈತ್ರ ಮಾಸಾದಿಯಾಗಿ ಶ್ರಾವಣ ಮಾಸಕ್ಕೆ ಗತ ಮಾಸಗಳು ೪, ಈ ೪ ನ್ನು ೩೦ ರಿಂದ ಗುಣಿಸಿದರೆ ೧೨೦ ತಿಥಿಗಳು. ಶುಕ್ಲಪಕ್ಷಾದಿಯಾಗಿ ಬಹುಳ ೫ ತಿಥಿಗೆ ೧೯ ಗತ ತಿಥಿಗಳಾದವು. ೧೨೦ ರಲ್ಲಿ ೧೯ ನ್ನು ಕೂಡಿಸಿದರೆ ೧೩೯ ಗತ ತಿಥಿಗಳು, ಇದರಲ್ಲಿ ಈ ಸಂವತ್ಸರಕ್ಕೆ ಮಾಡಿಕೊಂಡ ತಿಥಿ ಧ್ರುವಕಿಯ ದಿನಗಳು ೧೮ ನ್ನು ಕಳೆಯಲು ೧೨೧ ಆಯಿತು, ಈ ಶ್ರಾವಣ ಬ|| ೫ ಗೆ ೧೨೧ ತಿಥಿ ಪದಕವಾಯಿತು.

CC-0. Jangamwadi Math Collection. Digitized by eGangotri

ತಿಥಿ ಕೋಷ್ಟಕದಲ್ಲಿರುವ ಪರಾಖ್ಯ ಕೋಷ್ಟಕವನ್ನು ತೆಗಿಯುವ ಕ್ರಮ.

ತಿಥಿ ಕೋಷ್ಟಕದಲ್ಲಿ ಸಂಖ್ಯೆಯಲ್ಲಿ ತಿಥಿ, ಸ್ಫಷ್ಟಕೇಂದ್ರ ದಿನಗಳನ್ನು ಮಾತ್ರ ಕೂಡಿಸಿದರೆ ತಿಥಿಯ ಪರಾಖ್ಯ ಕೋಷ್ಟಕವಾಗುತ್ತದೆ. ಉದಾ–ಶ್ರಾವಣ ಬ|| ೫ ಗುರುವಾರಕ್ಕೆ ತಿಥಿ ಪದಕ ೧೨೧ ಇದರಲ್ಲಿ ತಿಥಿ ಸ್ಫಷ್ಟಕೇಂದ್ರ ದಿನಗಳು ೨೪ ನ್ನು ಕೂಡಿಸಲು ೧೪೫ ಆಯಿತು. ಇದೇ ಶ್ರಾವಣ ಬ|| ೫ ಗುರುವಾರಕ್ಕೆ ತಿಥಿ ಪರಾಖ್ಯ ಕೋಷ್ಟಕವು.

ನಕ್ಷತ್ರ ಪದಕವನ್ನು ತೆಗಿಯುವ ಕ್ರಮ.

ಯಾವ ದಿವಸಕ್ಕೆ ಸರಿಯಾಗಿ ನಕ್ಷತ್ರ ಪದಕವನ್ನು ಮಾಡಿಕೊಳ್ಳಬೇಕಾಗುತ್ತದೋ ಆ ದಿವಸದ ತಿಥಿ ಪದಕ ಸಂಖ್ಯೆಯನ್ನು ೨ ಪ್ರತಿಯಿಟ್ಟು, ಅದರಲ್ಲಿ ೧ ಪ್ರತಿಯನ್ನು ೩೬ ರಿಂದ ಭಾಗಿಸಬೇಕು. ಬಂದಲಬ್ಧವನ್ನು ಮತ್ತೊಂದು ಪ್ರತಿಯಲ್ಲಿ ಕಳೆಯಬೇಕು, ಉಳಿದ ಸಂಖ್ಯೆಯಲ್ಲಿ ನಕ್ಷತ್ರ ಸ್ಫಷ್ಟಕೇಂದ್ರ ದಿನಗಳನ್ನು ಮಾತ್ರ ಕೂಡಿಸಿದರೆ ನಕ್ಷತ್ರ ಪದಕ ಸಂಖ್ಯೆಯಾಗುತ್ತದೆ, ಇದರಲ್ಲಿ ಪರಾಖ್ಯ ಕೋಷ್ಟಕವಿಲ್ಲ.

ಉದಾಹರಣೆ.

ಶ್ರಾವಣ ಬ|| ೫ ಗುರುವಾರ ಇರುವ ತಿಥಿ ಪದಕ ೧೨೧ ಇದನ್ನು ೨ ಪ್ರತಿಯಿಟ್ಟು, ೧ ಪ್ರತಿಯಾದ ೧೨೧ ನ್ನು ೩೬ ರಿಂದ ಭಾಗಿಸಲು ಬಂದಲಬ್ಧ ೩, ಇದನ್ನು ಮತ್ತೊಂದು ಪ್ರತಿಯಾದ ೧೨೧ ರಲ್ಲಿ ಕಳೆಯಲು ೧೧೮ ಆಯಿತು. ಇದರಲ್ಲಿ ಆ ಸಂವತ್ಸರಕ್ಕೆ ಮಾಡಿಕೊಂಡ ನಕ್ಷತ್ರ ಸ್ಫಷ್ಟಕೇಂದ್ರ ದಿನ ೨೪ನ್ನು ಕೂಡಿಸಲು ೧೪೨ ಆಯಿತು. ಶ್ರಾವಣ ಬ|| ೫ ಗುರುವಾರಕ್ಕೆ ೧೪೨ ನಕ್ಷತ್ರ ಪದಕ ಸಂಖ್ಯೆಯಾಯಿತು.

ಯೋಗಪದಕವನ್ನು ತೆಗಿಯುವ ಕ್ರಮ.

ಯಾವದಿವಸ ಯೋಗಪದಕವನ್ನು ಮಾಡಿಕೊಳ್ಳಬೇಕಾಗುತ್ತದೋ ಆ ದಿವಸದ ತಿಥಿಪದಕ ಸಂಖೆಯನ್ನು ೨ ಪ್ರತಿಯಿಟ್ಟು ಅದರಲ್ಲಿ ವಂದು ಪ್ರತಿಯನ್ನು ೨೨

CC-0. Jangamwadi Math Collection. Digitized by eGangotri

ರಿಂದ ಭಾಗಿಸಬೇಕು ಬಂದ ಲಬ್ಧಸಂಖ್ಯೆಯನ್ನು ಮೊದಲನೆ ಪ್ರತಿಯಲ್ಲಿ ಕೂಡಿಸಿದರೆ ಯೋಗಪದಕವಾಗುತ್ತದೆ. ಯೋಗದ ಪದಕಸಂಖ್ಯೆಯಲ್ಲಿ ಆ ಸಂವತ್ಸರಕ್ಕೆ ಮಾಡಿಕೊಂಡ ಯೋಗಸ್ಫಷ್ಟಕೇಂದ್ರ ದಿನಗಳನ್ನು ಮಾತ್ರ ಕೂಡಿಸಿದರೆ ಯೋಗ ಪರಾಖ್ಯಪದಕ ಸಂಖ್ಯೆಯಾಗುತ್ತದೆ.

ಉದಾಹರಣೆ.

ಶ್ರಾವಣ ಬ|| ೫ ಗುರುವಾರ ಇರುವ ತಿಥಿಪದಕ ೧೨೧ ಇದನ್ನು ೨ ಪ್ರತಿ ಇಟ್ಟು ವಂದು ಪ್ರತಿಯಾದ ೧೨೧ ನ್ನು ೨೨ ರಿಂದ ಭಾಗಿಸಲು ಬಂದಲಬ್ಧ ೫ ಇದನ್ನು ಮತ್ತೊಂದು ಪ್ರತಿಯಾದ ೧೨೧ ರಲ್ಲಿ ಕೂಡಿಸಲು ೧೨೬ ಆಯಿತು. ಶ್ರಾವಣ ಬ|| ೫ ಗುರುವಾರಕ್ಕೆ ೧೨೬ ಯೋಗಪದಕವಾಯಿತು. ಯೋಗಪದಕ ೧೨೬ ರಲ್ಲಿ ಯೋಗಸ್ಫಷ್ಟಕೇಂದ್ರದಿನಗಳು ೨೫ನ್ನು ಕೂಡಿಸಲು ೧೫೧ ಯೋಗ ಪರಾಖ್ಯಪದಕವಾಯಿತು. ಇದೇಪ್ರಕಾರವಾಗಿ ತನಗೆ ಬೇಕಾದ ದಿವಸಕ್ಕೆ ಪದಕಗಳನ್ನು ಮಾಡಿಕೊಂಡು ಘಟಿಕಾದಿಗಳನ್ನು ಸಾಧಿಸಿಕೊಳ್ಳಬೇಕು.

ತಿಥಿಯ ಘಳಿಗೆ ಫಳಗಳನ್ನು ಮಾಡಿಕೊಳ್ಳುವ ಕ್ರಮ.

ಯಾವ ದಿವಸ ತಿಥಿ ಘಳಿಗೆ ಫಳಗಳನ್ನು ಮಾಡಿಕೊಳ್ಳಬೇಕಾಗುತ್ತದೋ ಆ ದಿವಸಕ್ಕೆ ಹಿಂದೆ ತಿಳಿಸಿದ ಪ್ರಕಾರ ತಿಥಿ ಪದಕ ಹಾಗು ಪರಾಖ್ಯ ಪದಕವನ್ನು ಮಾಡಿಕೊಂಡು ಮುಂದೆ ಬರೆದಿರುವ ತಿಥಿ ಪದಕ ಚಕ್ರವನ್ನು ನೋಡಿ ಯಾವ ಸಂಖ್ಯೆಯ ತಿಥಿ ಪದಕವಾಗಿರುತ್ತದೋ ಅಷ್ಟನೇ ಸಂಖ್ಯೆಯ ತಿಥಿ ಪದಕದ ಮನೆಯಲ್ಲಿರುವ ವಾರ, ದಿನ, ಘಳಿಗೆ, ಫಳಗಳನ್ನು ಬರೆದುಕೊಂಡು ಆ ದಿವಸಕ್ಕೆ ಸರಿಯಾಗಿ ಮಾಡಿಕೊಂಡಿರುವ ಪರಾಖ್ಯ ಪದಕದ ಮನೆಯಲ್ಲಿರುವ ಪರಾಖ್ಯ ಫಲದ ಘಳಿಗೆ ಫಳಗಳನ್ನು ಬರೆದುಕೊಂಡು ಅದರಲ್ಲಿ ಗುರ್ರು ಮಾಡಿರುವ ಧನ ರುಣವನ್ನು ಬರೆದುಕೊಳ್ಳುವದು. ಮತ್ತು ಪರಾಖ್ಯದ ಕೆಳಗಿನ ಮನೆಯಲ್ಲಿರುವ ಹಾರದ ಘಳಿಗೆ ಫಳಗಳನ್ನು ಬರೆದುಕೊಂಡು ಅದರಲ್ಲಿ ಗುರ್ರುಮಾಡಿರುವ ಧನ ರುಣವನ್ನು ಬರೆದುಕೊಳ್ಳುವದು. ಈ ರೀತಿಯಾಗಿ ತಿಥಿ ಪದಕದಲ್ಲಿರುವ ವಾರಾದಿ ಫಲವನ್ನು ಪರಾಖ್ಯವನ್ನು ಹಾರವನ್ನು ಬರೆದುಕೊಂಡು ಅನಂತರ ತಿಥಿಯ ಘಳಿಗೆ ಫಳಗಳನ್ನು ಮಾಡಿಕೊಳ್ಳಬೇಕು. ಹ್ಯಾಗಂದರೆ? ವಾರಾದಿ ಫಲದ ದಿನ, ಘಳಿಗೆ, ಫಳದಲ್ಲಿ ಪರಾ

CC-0. Jangamwadi Math Collection. Digitized by eGangotri

ಖ್ಯದ ಘಳಿಗೆ ಫಳಗಳನ್ನು ಧನವಾಗಿದ್ದರೆ ಕೂಡಿಸಬೇಕು, ರುಣವಾಗಿದ್ದರೆ ಕಳೆಯ ಬೇಕು. ಉಳಿದ ದಿನ, ಘಳಿಗೆ, ಫಳಗಳನ್ನು ಬ್ಯಾರೆಯಿಟ್ಟುಕೊಂಡು ಅನಂತರ ಆ ಸಂವತ್ಸರಕ್ಕೆ ಮಾಡಿಕೊಂಡಿರುವ ತಿಥಿಸ್ಪಷ್ಟಕೇಂದ್ರದ ದಿನಗಳನ್ನು ಬಿಟ್ಟು ಘಳಿಗೆ ಫಳಗಳನ್ನು ಹಾರ ಸಂಖ್ಯೆಯಿಂದ ಭಾಗಿಸಬೇಕು. ಬಂದ ಲಬ್ಧ ಘಳಿಗೆ. ಉಳಿದ ಶೇಷವನ್ನು ೬೦ ರಿಂದ ಗುಣಿಸಿ ಹಾರಸಂಖೆಯಿಂದ ಭಾಗಿಸಬೇಕು. ಬಂದಲಬ್ಧವೇ ಫಳ, ಈ ರೀತಿಯಾಗಿ ಮಾಡಿದರೆ ಹಾರದ ಫಲವಾಗುತ್ತದೆ. ಈ ಹಾರದ ಫಲವನ್ನು ಹಾರವು ಧನವಾಗಿದ್ದರೆ ಬ್ಯಾರೆಯಿಟ್ಟಿರುವ ವಾರ, ಘಳಿಗೆ, ಫಳಗಳಲ್ಲಿ ಕೂಡಿಸಬೇಕು. ರುಣವಾಗಿದ್ದರೆ ಕಳೆಯಬೇಕು. ಉಳಿದ ವಾರ, ಘಳಿಗೆ, ಫಳಗಳಲ್ಲಿ ತಿಥಿ ಭೋಗದ ವಾರ, ಘಳಿಗೆ, ಫಳಗಳನ್ನು ಕೂಡಿಸಬೇಕು. ಮೊದಲನೇ ಸಂಖ್ಯೆ ವಾರ ೭ ಕಿಂತ ಹೆಚ್ಚಾಗಿದ್ದರೆ ೭ ರಿಂದ ಭಾಗಿಸಬೇಕು, ಶೇಷವೇ ವಾರ, ಅದರ ಮುಂದೆಯಿರತಕ್ಕವೇ ತಿಥಿ, ಘಳಿಗೆ, ಫಳಗಳಾಗುತ್ತವೆ. (ಇಲ್ಲಿ ಹಾರದೊಳು ಒಂದು ವಿಶೇಷವಿರುತ್ತದೆ, ಏನಂದರೆ ಹಾರದ ಮನೆಯಲ್ಲಿ ಘಳಿಗೆ ಸಂಖ್ಯೆ ಒಂದೆಯಿದ್ದರೆ, ಸ್ಪಷ್ಟಕೇಂದ್ರದ ಘಳಿಗೆಯನ್ನು ಘಳಿಗೆ ಸಂಖ್ಯೆಯಿಂದಲೇ ಭಾಗಿಸಬೇಕು, ಘಳಿಗೆ, ಫಳ ಎರಡು ಸಂಖ್ಯೆಯಿದ್ದರೆ ಒಟ್ಟು ಫಳಗಳನ್ನು ಮಾಡಿಕೊಂಡು ಸ್ಪಷ್ಟಕೇಂದ್ರ ಘಳಿಗೆ ಫಳಗಳನ್ನು ಒಟ್ಟು ಫಳಗಳನ್ನು ಮಾಡಿಕೊಂಡು ಹಾರದ ಫಳಗಳಿಂದ ಭಾಗಿಸಲು ಹಾರದ ಘಟಿಕಾದಿ ಫಲವಾಗುತ್ತದೆ.) ಈ ಪ್ರಕಾರ ಮಾಡಿಕೊಂಡರೆ ಆದಿವಸದ ವಾರ, ತಿಥಿಯು ಘಳಿಗೆ ಫಳಗಳು ಬರುತ್ತವೆ.

ಶೋಭಾನುಕೃತು ಸಂ॥ ದ ಶ್ರಾವಣ ಬ॥ ೫ ಗುರುವಾರಕ್ಕೆ ಉದಾಹರಣೆ.

ಶ್ರಾವಣ ಬ| ೫ ಗುರುವಾರಕ್ಕೆ ತಿಥಿ ಪದಕ ೧೨೧ ಆ ದಿವಸಕ್ಕೆ ಪರಾಖ್ಯ ಪದಕ ೧೪೫ ಈ ಗ್ರಂಥದ ಮುಂದೆ ಹಾಕಿರುವ ತಿಥಿ ಪದಕ ಚಕ್ರದಲ್ಲಿ ೧೨೧ ನೇ ಪದಕದ ಮನೆಯಲ್ಲಿರುವ ವಾರ, ಘಳಿಗೆ, ಫಳವನ್ನು ಬರೆದುಕೊಳ್ಳುವದು; ಮತ್ತು ೧೪೫ ನೇ ಪರಾಖ್ಯ ಪದಕದ ಮನೆಯಲ್ಲಿರುವ, ಘಳಿಗೆ ಫಳವನ್ನು ಮತ್ತು ಅದರಲ್ಲಿ ಬರೆದಿರುವ ಧನ, ರುಣ, ಸಂಜ್ಞೆಯನ್ನು ಬರೆದುಕೊಳ್ಳುವದು, ಆ ಪರಾಖ್ಯದ ಕೆಳಗೆ ಇರುವ ಹಾರದ ಘಳಿಗೆಯನ್ನು ಅದರಲ್ಲಿ ಗುರ್ತುಮಾಡಿರುವ ಧನ ರುಣವನ್ನು ಬರೆದುಕೊಳ್ಳುವದು.

CC-0. Jangamwadi Math Collection. Digitized by eGangotri

ತಿಥಿ ಪದಕ ೧೨೧ ನೇ ಮನೆಯಲ್ಲಿರುವ ವಾರಾದಿಫಲ.	೦-೦-೩೬	
ಪರಾಖ್ಯ ಪದಕ ೧೪೫ ನೇ ಮನೆಯಲ್ಲಿರುವ ಪರಾಖ್ಯಫಲ.	೦-೨೩-೬	ಧನ.
ತಿಥಿ ಸ್ಪಷ್ಟಕೇಂದ್ರ ಘಳಿಗೆ ೫೮-೪೬ ನ್ನು ಹಾರ ೩೭ ರಿಂದ ಭಾಗಿಸಲು ಒಂದ ಘಳಿಗೆ ೧ ಫಳ ೩೫ ಹಾರಫಲ ೧-೩೫ ಇದನ್ನು ಹಾರ ಧನವಾದ್ದರಿಂದ ಪರಾಖ್ಯ ಕೂಡಿಸಿರುವ ವಾರಾದಿಯಲ್ಲಿ ಕೂಡಿಸಬೇಕು.	೦-೨೩-೪೨	
	೦- ೧-೩೫	ಹಾರಫಲ ಧನ.
	೦-೨೫-೧೭	ಇದರಲ್ಲಿ ತಿಥಿಸ್ಪಷ್ಟ ಭೋಗವನ್ನು ಕೂಡಿಸಬೇಕು.
	೫- ೮-೩೬	ತಿಥಿಭೋಗಕೂಡ್ಸಿಧೆ
	೫-೩೩-೫೩	ಇದರಲ್ಲಿ ಮೊದಲನೆ ಸಂಖ್ಯೆ ೫ನ್ನು ೭ರಿಂದ ಭಾಗಿಸಲು ಶೇಷ ೫ ಗುರುವಾರವಾಯಿತು.

ಈ ಪ್ರಕಾರ ಮಾಡಲು ಶ್ರಾವಣ ಬ| ೫ ಗುರುವಾರ ೩೩-೫೩ ಬಂದಿರುತ್ತೆ.

ತಿಥಿ ಸಂಖ್ಯೆಯನ್ನು ತೆಗಿಯುವ ಕ್ರಮ.

ಯಾವ ದಿವಸದ ತಿಥಿಯನ್ನುತಿಳಿಯಬೇಕಾಗುತ್ತದೋ ಆ ದಿವಸಕ್ಕೆ ಮಾಡಿಕೊಂಡಿರುವ; ತಿಥಿ ಪದಕದ ಸಂಖ್ಯೆಯಲ್ಲಿ ತಿಥಿ ಧೃವಕಿಯ ದಿನಗಳನ್ನು ಮಾತ್ರ ಕೂಡಿಸಿ ೩೦ ರಿಂದ ಭಾಗಿಸಬೇಕು, ಉಳಿದ ಶೇಷ ಸಂಖ್ಯೆಯಲ್ಲಿ ೧ ನ್ನು ಕೂಡಿಸಿದರೆ ಬಂದದ್ದೇ ಶುಕ್ಲಪಕ್ಷ ಪ್ರತಿಪದಾದಿ ತಿಥಿಯಾಗುತ್ತದೆ.

ಉದಾಹರಣೆ.

ಶ್ರಾವಣ ಬ| ೫ ಗುರುವಾರ ಇರುವ ತಿಥಿ ಪದಕ ೧೨೧ ಇದರಲ್ಲಿ ತಿಥಿ ಧೃವಕಿ ದಿನ ೧೮ ನ್ನು ಕೂಡಿಸಿದರೆ ೧೩೯ ಆಯಿತು. ಇದನ್ನು ೩೦ ರಿಂದ ಭಾಗಿಸಲು ಶೇಷ ೧೯ ರಲ್ಲಿ ೧ ಕೂಡಿಸಿದರೆ ೨೦ ಆಯಿತು. ಈ ೨೦ ನೇ ತಿಥಿ ಶುಕ್ಲಪ್ರತಿಪದಾದಿಯಾಗಿ ಲೆಕ್ಕ ಮಾಡಿದರೆ ಬಹುಳ ೫ ತಿಥಿಯಾಯಿತು.

CC-0. Jangamwadi Math Collection. Digitized by eGangotri

ಉಪರಿ ತಿಥಿ ಬರುವದನ್ನು ತಿಳಿಯುವ ಕ್ರಮ.

ತಿಥಿ ಘಳಿಗೆ ಫಳವನ್ನು ಮಾಡಿಕೊಳ್ಳುವ ಕಾಲದಲ್ಲಿ ವಾರ ಘಳಿಗೆಯಲ್ಲಿ ಘಳಿಗೆ ೧ಅಥವಾ ೨-೩ ಘಳಿಗೆ ಬರುತ್ತದೆ, ಮರುದಿವಸದ ಗಣಿತದಲ್ಲಿ ಹಿಂದಿನ ವಾರವೇ ಬಂದು ಘಳಿಗೆಯಲ್ಲಿ ೫೬ ಅಥವಾ ೫೮ ಬರುತ್ತದೆ, ಈ ಪ್ರಕಾರ ಬಂದರೆ ಹಿಂದಿನವಾರ ಉಪರಿ ಬಂದಿತೆಂದು ತಿಳಿದು ಮರುದಿವಸ ಗಣಿತದಿಂದ ಬಂದ ಘಳಿಗೆಗಳನ್ನು ಹಿಂದಿನವಾರಕ್ಕೆ ಉಪರಿ ಎಂತ ಬರೆದು ಸೇರಿಸಬೇಕು. ಇದೇ ಪ್ರಕಾರ ಉಪರಿ ತಿಥಿ ಘಳಿಗೆ ಫಳಗಳನ್ನು ಸಾಧಿಸಬೇಕು.

ಸಂಪೂರ್ಣ ತಿಥಿ ಬರುವದನ್ನು ತಿಳಿಯುವ ಕ್ರಮ.

ತಿಥಿ ಘಳಿಗೆ ಫಳವನ್ನು ಮಾಡಿಕೊಳ್ಳುವ ಕಾಲದಲ್ಲಿ ವಾರಾದಿ ಘಳಿಗೆಯಲ್ಲಿ ೫೮ ಅಥವಾ ೫೯ ಘಳಿಗೆ ಬಂದು, ಮರುದಿವಸ ವಾರಸಂಖ್ಯೆ ೧ ಹೆಚ್ಚು ಬಂದು ಘಳಿಗೆಯಲ್ಲಿ ೧ ಅಥವಾ ೨-೩ ಘಳಿಗೆ ಬರುತ್ತದೆ; ಈ ಪ್ರಕಾರ ೧ ವಾರ ಹೆಚ್ಚು ಬಂದರೆ ಆ ವಾರ ತಿಥಿ ೬೦ ಘಳಿಗೆ ಬಂದಿತ್ತೆಂದು ತಿಳಿದು ಮರುದಿವಸ ವಾರದಲ್ಲಿ ಅದೇ ತಿಥಿಯು ೧ ಅಥವಾ ೨-೩ ಘಳಿಗೆ ಇರುತ್ತದೆಂದು ತಿಳಿದುಕೊಳ್ಳಬೇಕು.

ನಕ್ಷತ್ರದ ಘಳಿಗೆ ಫಳವನ್ನು ಮಾಡಿಕೊಳ್ಳುವ ಕ್ರಮ.

ಯಾವ ದಿವಸ ನಕ್ಷತ್ರದ ಘಳಿಗೆ ಫಳಗಳನ್ನು ಮಾಡಿಕೊಳ್ಳಬೇಕಾಗುತ್ತದೋ ಆ ದಿವಸಕ್ಕೆ ಹಿಂದೆ ಹೇಳಿದ ಪ್ರಕಾರ ನಕ್ಷತ್ರ ಪದಕವನ್ನು ಮಾಡಿಕೊಂಡು ಆ ದಿವಸ ನಕ್ಷತ್ರ ಪದಕ ಸಂಖ್ಯೆಯು ಎಷ್ಟನೇದಾಗಿರುತ್ತದೋ ಅಷ್ಟನೇ ನಕ್ಷತ್ರ ಪದಕದ ಮನೆಯಲ್ಲಿರುವ ವಾರ, ಘಳಿಗೆ, ಫಳವನ್ನು ಬರೆದುಕೊಂಡು ಅದರ ಕೆಳಗೆ ಇರುವ ಹಾರದ ಘಳಿಗೆಯನ್ನು ಅದರಲ್ಲಿ ಗುರ್ತು ಮಾಡಿರುವ ಧನ ಋಣವನ್ನು ಬರೆದುಕೊಂಡು ನಂತರ ಆ ಸಂವತ್ಸರಕ್ಕೆ ಮಾಡಿಕೊಂಡ ನಕ್ಷತ್ರ ಸ್ಪಷ್ಟಕೇಂದ್ರದ ದಿನಗಳನ್ನು ಬಿಟ್ಟು ಘಳಿಗೆ ಫಳಗಳನ್ನು ಹಾರದ ಘಳಿಗೆಯಿಂದ ಭಾಗಿಸಬೇಕು. ಬಂದ ಘಳಿಗೆ ಫಳಗಳನ್ನು ಹಾರವು ಧನವಾಗಿದ್ದರೆ, ಹಿಂದೆಯಿಟ್ಟಿರುವ ವಾರಾದಿಯಲ್ಲಿ ಕೂಡಿಸಬೇಕು. ಋಣವಾಗಿದ್ದರೆ ಕಳೆಯಬೇಕು, ಈ ಪ್ರಕಾರ ಮಾಡಿಕೊಂಡ ಬಳಿಕ ಉಳಿದ ವಾರ, ಘಳಿಗೆ, ಫಳಗಳಲ್ಲಿ ಆ ಸಂವತ್ಸರಕ್ಕೆ ಮಾ

CC-0. Jangamwadi Math Collection. Digitized by eGangotri

ಡಿಕೊಂಡಿರುವ ನಕ್ಷತ್ರಭ ಭೋಗದ ದಿನ, ಘಳಿಗೆ, ಪಳಗಳನ್ನು ಕೂಡಿಸಬೇಕು. ಉಳಿದ ವಾಗ, ಘಳಿಗೆ, ಫಳಗಳೇ ಆ ವಾರದಲ್ಲಿರುವ ನಕ್ಷತ್ರದ ಘಳಿಗೆ ಫಳಗಳು ಬರುತ್ತವೆ. ನಕ್ಷತ್ರವನ್ನು ತಿಳಿಯಬೇಕಾದರೆ ಆ ದಿವಸಪರುವ ನಕ್ಷತ್ರ ಪದಕ ಸಂಖ್ಯೆಯಲ್ಲಿ ನಕ್ಷತ್ರ ಸ್ಫಷ್ಟಕೇಂದ್ರ ದಿನಗಳನ್ನು ಕಳೆದು ಆ ಸಂವತ್ಸರಕ್ಕೆ ಮಾಡಿಕೊಂಡ ನಕ್ಷತ್ರ ಧ್ರುವಕಿಯ ದಿನವನ್ನು ಕೂಡಿಸಿ ೨೭ ರಿಂದ ಭಾಗಿಸಬೇಕು, ಉಳಿದ ಶೇಷವೇ ಅಶ್ವಿನ್ಯಾದಿ ನಕ್ಷತ್ರವಾಗುತ್ತದೆ. ಮತ್ತು ಉಪರಿ ನಕ್ಷತ್ರ ಸಂಪೂರ್ಣನಕ್ಷತ್ರವನ್ನು ತಿಳಿದುಕೊಳ್ಳಬೇಕಾದರೆ, ಹಿಂದೆ ಹೇಳಿದ ಉಪರಿತಿಥಿ, ಸಂಪೂರ್ಣತಿಥಿಯು ಹೊರಟಂತೆ ನಕ್ಷತ್ರದಲ್ಲಿ ಅದೇ ಪ್ರಕಾರ ಬರುತ್ತದೆ.

ಉದಾಹರಣೆ.

ಶ್ರಾವಣ ಬ|| ೫ ಗುರುವಾರಕ್ಕೆ ಉದಾಹರಣೆ ಕೊಟ್ಟಿರುತ್ತದೆ. ಶ್ರಾವಣ ಬ|| ೫ ಗುರುವಾರಕ್ಕೆ ಹಿಂದೆ ಮಾಡಿಕೊಂಡ ಪ್ರಕಾರ ನಕ್ಷತ್ರಪದಕ ೧೪೨ ಆಗಿರುತ್ತದೆ. ಸದರಿ ೧೪೨ ನೇ ನಕ್ಷತ್ರ ಪದಕವನ್ನು ನೋಡಿ ಆ ಪದಕದ ಮನೆಯಲ್ಲಿರುವ ವಾರ, ಘಳಿಗೆ, ಫಳಗಳನ್ನು ಅದರ ಕೆಳಗಿನ ಮನೆಯಲ್ಲಿರುವ ಹಾರದ ಘಳಿಗೆ ಫಳಗಳನ್ನು ಅದರಲ್ಲಿ ಗುರ್ರು ಮಾಡಿರುವ ಧನ ರುಣವನ್ನು ಸಹಾ ಬರೆದುಕೊಂಡು ಘಳಿಗೆ ಫಳಗಳನ್ನು ಸಾಧಿಸಿಕೊಳ್ಳಬೇಕು.

ನಕ್ಷತ್ರಪದಕ ೧೪೨ ನೇ ಮನೆಯಲ್ಲಿರುವ ವಾರಾದಿ.	೪-೫-೨೩	
ಅದರ ಕೆಳಗಿರುವ ಹಾರ ೬೦೦ ಧನವಾಗಿರುತ್ತೆ. ನಕ್ಷತ್ರ ಸ್ಫಷ್ಟಕೇಂದ್ರದ ಘಳಿಗೆ ೮-೩೬ ನ್ನು ೬೦೦ ರಿಂದ ಭಾಗಿಸಲು ಲಬ್ಧ ಸೊನ್ನೆ ಬಂದಿತು. ಹಾರಫಲ ೦-೦ ಧನವಾದ್ದರಿಂದ ಮೇಲಿನ ವಾರಾದಿಯಲ್ಲಿ ಕೂಡಿಸುವದು.	೦-೦-೦	ಹಾರಫಲಧನ.
	೪-೫-೨೩	[ಕೂಡಿಸು.
	೧-೪೨-೪೭	ನಕ್ಷತ್ರ ಭ ಭೋಗ
	೫-೪೮-೧೦	ಮೊದಲನೇ ಸಂಖ್ಯೆ
		೫ ಗುರುವಾರ

ರೇವತೀ ನಕ್ಷತ್ರ ೪೮-೧೦ ಇರುತ್ತದೆ.

ಶ್ರಾವಣ ಬ| ೫ ಗುರುವಾರ ಇರುವ ನಕ್ಷತ್ರ ಪದಕ ೧೪೨ ಇದರಲ್ಲಿ ನಕ್ಷತ್ರ ಸ್ಫಷ್ಟಕೇಂದ್ರ ದಿನಗಳು ೨೪ ನ್ನು ಕಳೆಯಲು ೧೧೮ ಆಯಿತು. ಇದರಲ್ಲಿ ನಕ್ಷತ್ರ ಧ್ರುವಕಿ ದಿನಗಳು ೧೭ ನ್ನು ಕೂಡಿಸಲು ೧೩೫ ಇದನ್ನು ೨೭ ರಿಂದ

CC-0. Jangamwadi Math Collection. Digitized by eGangotri

ಭಾಗಿಸಲು ಶೇಷವು ಸೊನ್ನೆ ಬಂದದ್ದರಿಂದ ರೇವತೀ ನಕ್ಷತ್ರವಾಯಿತು. ಗುರು ವಾರ ರೇವತೀ ನಕ್ಷತ್ರ ಇರುತ್ತದೆಂದು ತಿಳಿದುಕೊಳ್ಳಬೇಕು.

ಯೋಗದ ಘಳಿಗೆ ಫಳಗಳನ್ನು ಮಾಡುವ ಕ್ರಮ.

ಯಾವದಿವಸ ಯೋಗದ ಘಳಿಗೆ ಫಳಗಳನ್ನು ಮಾಡಿಕೊಳ್ಳಬೇಕಾಗುತ್ತದೋ ಆ ದಿವಸಕ್ಕೆ ಹಿಂದೆ ಹೇಳಿದ ಪ್ರಕಾರ ಯೋಗ ಪದಕವನ್ನು ಹಾಗು ಪರಾಖ್ಯ ಪದಕವನ್ನು ಮಾಡಿಕೊಂಡು; ಎಷ್ಟನೇ ಯೋಗ ಪದಕವಾಗಿರುತ್ತದೋ ಅಷ್ಟನೇ ಯೋಗ ಪದಕದ ಮನೆಯಲ್ಲಿರುವ ವಾರ, ಘಳಿಗೆ, ಫಳಗಳನ್ನು ಬರೆದುಕೊಂಡು ಅನಂತರ ಎಷ್ಟನೇ ಪರಾಖ್ಯವಾಗಿರುತ್ತದೋ ಅಷ್ಟನೇ ಪರಾಖ್ಯ ಪದಕದಲ್ಲಿರುವ ಪರಾಖ್ಯ ಫಲದ ಘಳಿಗೆ ಫಳಗಳನ್ನು ಆ ಮನೆಯಲ್ಲಿ ಗುರ್ತು ಮಾಡಿರುವ ಧನ ರುಣವನ್ನು ಬರೆದುಕೊಳ್ಳುವದು. ಮತ್ತು ಆ ಪರಾಖ್ಯ ಪದಕದ ಕೆಳಗಿನ ಮನೆಯಲ್ಲಿರುವ ಹಾರದ ಘಳಿಗೆಯನ್ನು ಅದರಲ್ಲಿ ಗುರ್ತು ಮಾಡಿರುವ ಧನರುಣವನ್ನು ಬರೆದುಕೊಳ್ಳುವದು; ಈ ಪ್ರಕಾರ ಬರೆದುಕೊಂಡು ಮೇಲೆ ಬರೆದುಕೊಂಡಿರುವ ವಾರ ಘಳಿಗೆ ಫಳಗಳಲ್ಲಿ ಪರಾಖ್ಯ ಫಲದ ಘಳಿಗೆಯು ಧನವಾಗಿದ್ದರೆ ಕೂಡಿಸಬೇಕು, ರುಣವಾಗಿದ್ದರೆ ಕಳೆಯಬೇಕು. ಉಳಿದ ವಾರ, ಘಳಿಗೆ, ಫಳಗಳನ್ನು ಬೇರೆಯಿಟ್ಟುಕೊಂಡು ಬಳಿಕ ಆ ಸಂವತ್ಸರಕ್ಕೆ ಮಾಡಿಕೊಂಡ ಯೋಗ ಸ್ಪಷ್ಟಕೇಂದ್ರದ ದಿನಗಳನ್ನು ಬಿಟ್ಟು ಘಳಿಗೆ ಫಳಗಳನ್ನು ಹಾರ ಸಂಖ್ಯೆಯಿಂದ ಭಾಗಿಸಬೇಕು. ಬಂದಲಬ್ಧ ಘಳಿಗೆ, ಉಳಿದ ಶೇಷವನ್ನು ೬೦ ರಿಂದ ಗುಣಿಸಿ ಹಾರ ಸಂಖ್ಯೆಯಿಂದ ಭಾಗಿಸಬೇಕು ಬಂದಲಬ್ಧವೇ ಫಳ, ಈ ಹಾರದ ಘಳಿಗೆ ಫಳವನ್ನು ಹಾರವು ಧನವಾಗಿದ್ದರೆ ಬ್ಯಾರೆಯಿಟ್ಟಿರುವ ವಾರ, ಘಳಿಗೆ, ಫಳದಲ್ಲಿ ಕೂಡಿಸಬೇಕು. ರುಣವಾಗಿದ್ದರೆ ಕಳೆಯಬೇಕು. ಉಳಿದ ವಾರ, ಘಳಿಗೆ, ಫಳದಲ್ಲಿ ಆ ಸಂವತ್ಸರಕ್ಕೆ ಮಾಡಿಕೊಂಡ; ಯೋಗ ಭೋಗದ ದಿನಾದಿ ಫಲವನ್ನು ಕೂಡಿಸಬೇಕು. ಮೊದಲನೇ ಸಂಖ್ಯೆ ವಾರ, ಇದು ೭ ಕ್ಕಿಂತ ಅಧಿಕವಾಗಿದ್ದರೆ ೭ ರಿಂದ ಭಾಗಿಸಬೇಕು. ಉಳಿದ ಶೇಷವೇ ವಾರವು. ಮುಂದೆ ಇರುವ ಘಳಿಗೆ, ಫಳಗಳೇ ಯೋಗದ ಘಳಿಗೆ ಫಳಗಳಾಗುತ್ತವೆ. ಯೋಗವನ್ನು ತಿಳಿಯುವದು ಹ್ಯಾಗಂದರೆ—ಯಾವದಿವಸ ಯೋಗವನ್ನು ತಿಳಿಯಬೇಕಾಗುತ್ತದೋ ಆ ದಿವಸದ ಯೋಗ ಪದಕ ಸಂಖ್ಯೆ

CC-0. Jangamwadi Math Collection. Digitized by eGangotri

ಯಲ್ಲಿ ಆ ಸಂವತ್ಸರಕ್ಕೆ ಮಾಡಿಕೊಂಡ ಯೋಗ ಧೃವಕಿಯ ದಿನಗಳನ್ನು ಕೂಡಿಸಿ ೨೭ ರಿಂದ ಭಾಗಿಸಬೇಕು. ಉಳಿದ ಶೇಷವೇ ವಿಷ್ಕಂಭಾದಿ ಯೋಗವಾಗುತ್ತದೆ. ಇದೇ ಪ್ರಕಾರ ಯೋಗವನ್ನು ಸಾಧಿಸಿಕೊಳ್ಳಬೇಕು. ಈ ಯೋಗದ ಉಪರಿ ಸಂಪೂರ್ಣವನ್ನು ತಿಥಿಯಲ್ಲಿ ಹೇಳಿದ ಪ್ರಕಾರವೇ ಬರುತ್ತದೆ, ಅದರಂತೆ ಮಾಡಿಕೊಳ್ಳಬೇಕು.

ಉದಾಹರಣೆ.

ಶೋಭಾನುಕೃತು ಸಂವತ್ಸರದ ಶ್ರಾವಣ ಬ| ೫ ಗುರುವಾರಕ್ಕೆ ಯೋಗವನ್ನು ಮಾಡಿರುತ್ತೆ.

ಶ್ರಾವಣ ಬ| ೫ ಗುರುವಾರಕ್ಕೆ ಯೋಗಪದಕ ಸಂಖ್ಯೆ ೧೨೭ ನೇ ಯೋಗಪದಕದ ಮನೆಯಲ್ಲಿರುವ ವಾರ, ಘಳಿಗೆ, ಫಳಗಳನ್ನು ಬರೆದುಕೊಳ್ಳುವದು; ಆ ದಿವಸಕ್ಕೆ ಪರಾಖ್ಯ ಪದಕ ೧೫೧ ನೇ ಪದಕದ ಮನೆಯಲ್ಲಿರುವ ಪರಾಖ್ಯದ ಘಳಿಗೆ ಫಳವನ್ನು ಗುರ್ತು ಮಾಡಿರುವ ಧನ ರುಣವನ್ನು ಬರೆದುಕೊಳ್ಳುವದು, ಹಾರಸಂಖ್ಯೆ ೩೮ ಧನ.

ಯೋಗಪದಕ ೧೨೭ ನೇ ಮನೆಯಲ್ಲಿರುವ ವಾರಾದಿ	೬-೪೪-೪೫	
ಪರಾಖ್ಯಪದಕ ೧೫೧ ನೇ ಮನೆಯಲ್ಲಿರುವ ಪರಾಖ್ಯಫಲ.	೦-೧೯-೧೦	
ಪರಾಖ್ಯ ಧನವಾದ್ದರಿಂದ ಕೂಡಿಸಿರುತ್ತೆ.	೭- ೩-೫೫	
	೦- ೧-೨೮	ಹಾರಫಲ ಧನ.
	೭- ೫-೨೩	
	೪-೫೮- ೭	ಯೋಗಭೋಗ ಕೂಡಿಸುವದು.
	೧೨-೩-೩೦	

ಯೋಗ ಸ್ಫಷ್ಟಕೇಂದ್ರ ಘಳಿಗೆ ೫೫-೪೬ ನ್ನು ಹಾರ ಸಂಖ್ಯೆಯಾದ ೩೮ ರಿಂದ ಭಾಗಿಸಲು ಬಂದ ಘಳಿಗೆ ೧ ಫಳ ೨೮ ಬಂತು ಇದನ್ನು ಹಾರವು ಧನವಾದ್ದರಿಂದ ಮೇಲಿನ ವಾರಾದಿಯಲ್ಲಿ ಕೂಡಿಸಬೇಕು.

ಇಲ್ಲಿ ವಾರಸಂಖ್ಯೆಯು ೭ ಕ್ಕಿಂತ ಅಧಿಕವಾದ್ದರಿಂದ ೭ ರಿಂದ ಭಾಗಿಸಲು ಶೇಷ ೫ ಗುರುವಾರವಾಯಿತು.

CC-0. Jangamwadi Math Collection. Digitized by eGangotri

ಯೋಗಮಾಡಿದ್ದು—ಆ ದಿವಸದ ಯೋಗಪದಕ ೧೨೬ ಇದರಲ್ಲಿ ಯೋಗ ಧ್ರುವಕಿಯ ದಿನ ೧೭ ನ್ನು ಕೂಡಿಸಲು ೧೪೩ ಆಯಿತು. ಇದನ್ನು ೨೭ ರಿಂದ ಭಾಗಿಸಲು ಉಳಿದ ಶೇಷ ೮ ನೇ ಯೋಗ ವಿಷ್ಕಂಭಾದಿಯಾಗಿ ಧೃತಿ ನಾಮ ಯೋಗವಾಯಿತು. ಶ್ರಾವಣ ಬ| ೫ ಗುರುವಾರ ಧೃತಿ ನಾಮಯೋಗ ೩-೫೧ ಇರುತ್ತದೆ. ಇದೇ ಪ್ರಕಾರ ತನಗೆ ಬೇಕಾದಕಾಲಕ್ಕೆ ಯೋಗವನ್ನು ಸಾಧಿಸಿಕೊಳ್ಳ ತಕ್ಕದ್ದು.

ಕರಣವನ್ನು ಮಾಡಿಕೊಳ್ಳುವ ಕ್ರಮ.

ಅಹಸ್ಸಿಗಿಂತಲೂ ತಿಥಿ ಘಳಿಗೆ ಹೆಚ್ಚಾಗಿದ್ದ ಸಮಯದಲ್ಲಿ ಕರಣವನ್ನು ಮಾಡುವ ಕ್ರಮ.

ಯಾವದಿವಸ ಕರಣವನ್ನು ಮಾಡಿಕೊಳ್ಳಬೇಕಾಗುತ್ತದೋ ಆ ದಿವಸದ ಉದಯದ ತಿಥಿ ಸಂಖ್ಯೆಯನ್ನ ೨ ರಿಂದ ಗುಣಿಸಿ ಬಂದ ಮೊತ್ತದಲ್ಲಿ ೨ ಸಂಖ್ಯೆಯನ್ನು ಕಳೆದು ೭ ರಿಂದ ಭಾಗಿಸಬೇಕು. ಉಳಿದ ಶೇಷ ಸಂಖ್ಯೆಯೇ ಬವಾದಿಕರಣವಾಗುತ್ತದೆ; ಈ ಕರಣದ ಘಳಿಗೆಯನ್ನು ಮಾಡಿಕೊಳ್ಳಬೇಕಾದರೆ ಆ ದಿವಸದ ತಿಥಿಯನ್ನು ಆದ್ಯಾಂತವನ್ನು ಮಾಡಿಕೊಂಡು—ತಿಥಿ ಆದ್ಯಾಂತವೆಂದರೆ ಹಿಂದಿನ ತಿಥಿ ಘಳಿಗೆಯನ್ನು ೬೦ ರಲ್ಲಿ ಕಳೆದುಳಿದ ಘಳಿಗೆಯಲ್ಲಿ ಆ ದಿವಸದ ತಿಥಿ ಘಳಿಗೆಯನ್ನು ಕೂಡಿಸಿದರೆ ತಿಥಿ ಆದ್ಯಾಂತವಾಗುತ್ತದೆ, ಈ ತಿಥಿ ಆದ್ಯಂತ ಘಳಿಗೆಯನ್ನು ೨ ರಿಂದ ಭಾಗಿಸಬೇಕು. ಬಂದ ಘಳಿಗೆ ಫಳಗಳನ್ನು ಆ ದಿವಸದ ತಿಥಿ ಘಳಿಗೆಯಲ್ಲಿ ಕಳೆಯಬೇಕು. ಉಳಿದ ಘಳಿಗೆ ಫಳಗಳೇ ಕರಣದ ಘಳಿಗೆ ಫಳಗಳಾಗುತ್ತವೆ.

ಅಹಸ್ಸಿಗಿಂತಲೂ ತಿಥಿ ಘಳಿಗೆ ಕಡಿಮೆಯಾಗಿದ್ದ ಸಮಯದಲ್ಲಿ ಕರಣವನ್ನು ಮಾಡುವಕ್ರಮ.

ಅಹಸ್ಸಿಗಿಂತ ತಿಥಿ ಘಳಿಗೆ ಕಡಿಮೆಯಾಗಿದ್ದಲ್ಲಿ ಆ ದಿನದ ತಿಥಿಯನ್ನು ೨ ರಿಂದ ಗುಣಿಸಿ ಬಂದ ಮೊತ್ತದಲ್ಲಿ ೧ ಸಂಖ್ಯೆಯನ್ನು ಕಳೆದು ೭ ರಿಂದ ಭಾಗಿಸಬೇ

CC-0. Jangamwadi Math Collection. Digitized by eGangotri

ಕು. ಉಳಿದ ಶೇಷ ಸಂಖ್ಯೆಯೇ ಬವಾದಿಕರಣವಾಗುತ್ತದೆ. ಈ ಕರಣದ ಘಳಿಗೆಯನ್ನು ಮಾಡಬೇಕಾದರೆ ಆ ದಿವಸ ತಿಥಿ, ಘಳಿಗೆ, ಫಳಗಳು ಎಷ್ಟು ಇರುತ್ತವೋ ಅಷ್ಟೇ ಕರಣದ ಘಳಿಗೆಗಳಾಗುತ್ತವೆ. ತಿಥಿ ಘಳಿಗೆಗಳೆ ಕರಣದ ಘಳಿಗೆಗಳೆಂದು ತಿಳಿಯತಕ್ಕದ್ದು.

ಉಪರಿ ತಿಥಿ ಇದ್ದದಿವಸ ಕರಣವನ್ನು ಸಾಧಿಸುವಕ್ರಮ.

ಉಪರಿ ತಿಥಿ ಇದ್ದ ದಿವಸ ೩ ಕರಣಗಳು ಬರುತ್ತವೆ. ಉಪರಿ ತಿಥಿ ಘಳಿಗೆಗಳನ್ನು ೨ ಪ್ರತಿಯಿಟ್ಟು, ಒಂದು ಪ್ರತಿಯನ್ನು ೨ ರಿಂದ ಭಾಗಿಸಿ ಬಂದ ಲಬ್ಧ ಘಳಿಗೆಯನ್ನು ಮತ್ತೊಂದು ಪ್ರತಿಯಲ್ಲಿ ಕಳೆಯಬೇಕು. ಉಳಿದ ಘಳಿಗೆ ಫಳಗಳೇ ಉಪರಿ ದಿನದ ಕರಣದ ಘಳಿಗೆ ಫಳಗಳಾಗುತ್ತವೆ; ಉದಯ ತಿಥಿ ಘಳಿಗೆಗಳೇ ಉದಯ ಕರಣದ ಘಳಿಗೆಗಳಾಗುತ್ತವೆ.

ಚರಸ್ಥಿರ ಕರಣಗಳು.

ಬವ, ಬಾಲವ, ಕೌಲವ, ತೈತುಲ, ಗರಜೆ, ವಣಿಜೆ, ಭದ್ರ ಇವು ೭ ಚರ ಕರಣಗಳು ಮತ್ತು ಕೃಷ್ಣಪಕ್ಷದ ಚತುರ್ದಶಿಯ ಉತ್ತರಾರ್ಧದಲ್ಲಿ ಶಕುನಿಯು ಅಮಾವಾಸ್ಯೆಯ ಪೂರ್ವಾರ್ಧದಲ್ಲಿ ಚತುಷ್ಪಾನ್ ಅಮಾವಾಸ್ಯೆಯ ಉತ್ತರಾರ್ಧದಲ್ಲಿ ನಾಗವಾ್ ಶುಕ್ಲಪಕ್ಷ ಪ್ರತಿಪದದ ಪೂರ್ವಾರ್ಧದಲ್ಲಿ ಕಿಂಸ್ತುಘ್ನವು ಇವು ೪ ಸ್ಥಿರ ಕರಣಗಳು. ತಿಥಿ ಕ್ರಮವಾಗಿ ಬರುತ್ತವೆ.

ಮತ್ತೊಂದುಪ್ರಕಾರ ಸುಲಭರೀತಿಯಾಗಿ ಕರಣಗಳನ್ನು ಮಾಡಿಕೊಳ್ಳುವಕ್ರಮ.

ಗಣಿತವಿಲ್ಲದೆ ಈ ಕೆಳಗೆ ಬರೆದಿರುವ ಶುಕ್ಲಪಕ್ಷ, ಕೃಷ್ಣಪಕ್ಷದ ಪೂರ್ವಾರ್ಧ ಉತ್ತರಾರ್ಧ ತಿಥಿಗಳ ಮೇಲಿಂದ ಕರಣಗಳನ್ನು ಮಾಡಿಕೊಳ್ಳಬೇಕು. ತಿಥಿ ಘಳಿಗೆಯು ೩೦ ಘಳಿಗೆಗಳಿಗಿಂತ ಅಧಿಕವಾಗಿದ್ದರೆ ತಿಥಿ ಪೂರ್ವಾರ್ಧವೆಂತಲೂ ಕಡಿಮೆಯಾಗಿದ್ದರೆ ಉತ್ತರಾರ್ಧವೆಂತಲೂ ತಿಳಿಯತಕ್ಕದ್ದು.

CC-0. Jangamwadi Math Collection. Digitized by eGangotri

ತಿಥಿಗಳ ಮೇಲಿಂದ ಕರಣಗಳನ್ನು ನೋಡಿಕೊಳ್ಳುವ ಚಕ್ರವು.

ಶುಕ್ಲ ಪಕ್ಷ ತಿಥಿಗಳು.	ಶುಕ್ಲಪಕ್ಷದೊಳು ತಿಥಿ ಪೂರ್ವಾರ್ಧ ಉತ್ತರಾರ್ಧದಲ್ಲಿ ಬರತಕ್ಕ ಕರಣಗಳು.		ಕೃಷ್ಣ ಪಕ್ಷ ತಿಥಿಗಳು.	ಕೃಷ್ಣಪಕ್ಷದೊಳು ತಿಥಿ ಪೂರ್ವಾರ್ಧ ಉತ್ತರಾರ್ಧದಲ್ಲಿ ಬರತಕ್ಕ ಕರಣಗಳು	
	ಪೂರ್ವಾರ್ಧ.	ಉತ್ತರಾರ್ಧ.		ಪೂರ್ವಾರ್ಧ	ಉತ್ತರಾರ್ಧ.
ಪ್ರತಿಪದ	ಕಿಂಸ್ತುಘ್ನ	ಬವ	ಪ್ರತಿಪದ	ಬಾಲವ	ಕೌಲವ
ದ್ವಿತೀಯ	ಬಾಲವ	ಕೌಲವ	ದ್ವಿತೀಯ	ತೈತುಲ	ಗರಜಿ
ತೃತೀಯ	ತೈತುಲ	ಗರಜಿ	ತೃತೀಯ	ವಣಿಜಿ	ಭದ್ರ
ಚತುರ್ಥಿ	ವಣಿಜಿ	ಭದ್ರ	ಚತುರ್ಥಿ	ಬವ	ಬಾಲವ
ಪಂಚಮಿ	ಬವ	ಬಾಲವ	ಪಂಚಮಿ	ಕೌಲವ	ತೈತುಲ
ಷಷ್ಠಿ	ಕೌಲವ	ತೈತುಲ.	ಷಷ್ಠಿ	ಗರಜಿ	ವಣಿಜಿ
ಸಪ್ತಮಿ	ಗರಜಿ	ವಣಿಜಿ	ಸಪ್ತಮಿ	ಭದ್ರ	ಬವ
ಅಷ್ಟಮಿ	ಭದ್ರ	ಬವ	ಅಷ್ಟಮಿ	ಬಾಲವ	ಕೌಲವ
ನವಮಿ	ಬಾಲವ	ಕೌಲವ	ನವಮಿ	ತೈತುಲ	ಗರಜಿ
ದಶಮಿ	ತೈತುಲ	ಗರಜಿ	ದಶಮಿ	ವಣಿಜಿ	ಭದ್ರ
ಏಕಾದಶಿ	ವಣಿಜಿ	ಭದ್ರ	ಏಕಾದಶಿ	ಬವ	ಬಾಲವ
ದ್ವಾದಶಿ	ಬವ	ಬಾಲವ	ದ್ವಾದಶಿ	ಕೌಲವ	ತೈತುಲ
ತ್ರಯೋದಶಿ	ಕೌಲವ	ತೈತುಲ	ತ್ರಯೋದಶಿ	ಗರಜಿ	ವಣಿಜಿ
ಚತುರ್ದಶಿ	ಗರಜಿ	ವಣಿಜಿ	ಚತುರ್ದಶಿ	ಭದ್ರ	ಶಕುನಿ
ಪೌರ್ಣಿಮಾ	ಭದ್ರ	ಬವ	ಅಮಾವಾಸ್ಯೆ	ಚತುಷ್ಪಾತ್	ನಾಗವಾನ್

ಉದಾಹರಣೆ.

ಶೋಭಾನುಕೃತು ಸಂವತ್ಸರದ ಶ್ರಾವಣ ಬ|| ೫ ಗುರುವಾರಕ್ಕೆ ಕರಣಮಾಡಿದ್ದು.

ಶ್ರಾವಣ ಬ| ೫ ಗುರುವಾರ ಪಂಚಮಿ ; ಘಳಿಗೆ ೩೩-೫೩ ಇರುತ್ತದೆ. ಶುಕ್ಲಪಕ್ಷ ಪ್ರತಿಪದಾದಿಯಾಗಿ ಬಹುಳ ಪಂಚಮಿಗೆ ಒಟ್ಟು ತಿಥಿಗಳು ೨೦ ಇದನ್ನು ೨ ರಿಂದ ಗುಣಿಸಲು ೪೦ ಆಯಿತು. ಇದರಲ್ಲಿ ೨ ಸಂಖ್ಯೆಯನ್ನು ಕಳೆಯಲು ಉಳಿದದ್ದು ೩೮, ಇದನ್ನು ೭ ರಿಂದ ಭಾಗಿಸಲು ಶೇಷ ೩ ಉಳಿಯಿತು. ಇದೇ ಬವಾದಿ ಕೌಲವಾಕರಣವಾಯಿತು. ಪಂಚಮಿ ತಿಥಿ ಘಳಿಗೆಗಳು ೩೦

CC-0. Jangamwadi Math Collection. Digitized by eGangotri

ಕ್ಕಿಂತ ಅಧಿಕವಾಗಿರುವದರಿಂದ ಪಂಚಮೀ ತಿಥಿಯನ್ನು ಆದ್ಯಾಂತಮಾಡಿಕೊಳ್ಳಬೇಕು. ಹಿಂದಿನ ಬ| ೪ ತಿಥಿಯ ಘಳಿಗೆ ೩೩-೧೮ ಇರುತ್ತದೆ. ಇದನ್ನು ೬೦ ರಲ್ಲಿ ಕಳೆಯಲು ಉಳಿದದ್ದು ೨೬-೪೨ ಇದರಲ್ಲಿ ಪಂಚಮಿ ತಿಥಿ ಘಳಿಗೆ ೩೩-೫೩ ನ್ನು ಕೂಡಿಸಿದರೆ ೬೦-೩೫ ಪಂಚಮಿ ತಿಥಿಯ ಆದ್ಯಾಂತವಾಯಿತು. ಈ ಆದ್ಯಾಂತ ೬೦-೩೫ ನ್ನು ೨ ರಿಂದ ಭಾಗಿಸಲು ಬಂದದ್ದು ೩೦-೧೭ ಇದನ್ನು ಪಂಚಮಿ ತಿಥಿಯ ಘಳಿಗೆ ೩೩-೫೩ ರಲ್ಲಿ ಕಳೆಯಲು ಉಳಿದದ್ದು ೩-೩೬ ಇದೇ ಕೌಲವಾ ಕರಣದ ಘಳಿಗೆಯಾಯಿತು. ಶ್ರಾಮಣ ಬ|| ೫ ಗುರುವಾರ ಕೌಲವಾ ಕಲಣ ಘಳಿಗೆ ೩-೨೬ ಬಂದಿರುತ್ತದೆ.

ಹಿಂದೆ ಹಾಕಿರುವ ಚೆಕ್ರರೀತ್ಯಾ ಕರಣವನ್ನು ಮಾಡಿದ ಉದಾಹರಣೆ.

ಕೃಷ್ಣಪಕ್ಷ ಪಂಚಮಿ ತಿಥಿಯ ಘಳಿಗೆಗಳು ೩೩-೫೩ ಇರುವದರಿಂದ ೩೦ ಕ್ಕಿಂತ ಅಧಿಕವಾಗಿರುತ್ತದೆ. ಕಾರಣ ಇಲ್ಲಿ ಪಂಚಮಿ ತಿಥಿಯೂ ಪೂರ್ವಾರ್ಧದಲ್ಲಿರುತ್ತದೆಂದು ತಿಳಿದುಕೊಂಡು ಹಿಂದಿನ ಚಕ್ರದಲ್ಲಿ ಕೃಷ್ಣಪಕ್ಷ ಪಂಚಮಿ ತಿಥಿಯ ಪೂರ್ವಾರ್ಧದಲ್ಲಿ ಕೌಲವಾಕರಣವಿರುತ್ತದೆ. ಇದರಂತೆ ನೋಡಿಕೊಂಡು ಮೇಲಿನ ಕ್ರಮದಂತೆ ಘಳಿಗೆಗಳನ್ನು ಮಾಡಿಕೊಳ್ಳಬೇಕು. ಚಕ್ರದಲ್ಲಿ ಬರೆದಿರುವ ಶುಕ್ಲಪಕ್ಷ ಕೃಷ್ಣ ಪೂರ್ವಾರ್ಧ ಉತ್ತರಾರ್ಧ ತಿಥಿಗಳ ಮೇಲಿಂದ ಕರಣಗಳನು ಮಾಡಿಕೊಳ್ಳುವದು ಬಹಳ ಸುಲಭವಾಗಿರುತ್ತದೆ. ಇದರಂತೆ ಕರಣಗಳನ್ನು ಮಾಡಿಕೊಳ್ಳಬೇಕು.

ಕ್ರಮವಾಗಿ ಒಂದು ಸಂವತ್ಸರದ ಸಂಪೂರ್ಣ ಪಂಚಾಂಗವನ್ನು ಗುಣಿಸತಕ್ಕವರು ಈ ಕೆಳಗೆ ಬರೆದಿರುವ ಮರ್ಮ ವಿಷಯಗಳನ್ನು ಚೆನ್ನಾಗಿ ಮನನ ಮಾಡಿಕೊಂಡಿರಬೇಕು.

ಈ ಸಿದ್ಧಾಂತವು ಸೌರಮಾಸದಿಂದ ಹುಟ್ಟಿರುವದರಿಂದ ಮೇಷ ಸಂಕ್ರಮಣ ಪ್ರವೇಶವಾದ ದಿನವೆ ಹೊಸ ಸಂವತ್ಸರದ ಪ್ರಥಮದಿನವಾಗಿ ತಿಳಿದುಕೊಂಡು; ಮೇಷ ಸಂಕ್ರಮಣದ ದಿನದವರೆಗೂ ಗತ ವರುಷದ ತಿಥ್ಯಾದಿ ಸ್ಫುಟ ಭೋಗವನ್ನು

SRI JAGADGURU VISHWARADHYA
JNANA SIMHASAN JNANAMANDIR
CC-0. Jangamwadi Math Collection. Digitized by eGangotri
Jangamwadi Math, VARANASI
Acc. No.

ಇಟ್ಟುಕೊಂಡು ಮಾಡಿಕೊಳ್ಳಬೇಕು. ತಿಥಿ ಧೃವಕಿಯ ದಿನಗಳು ಎಷ್ಟು ಇರುತ್ತವೋ ಚೈತ್ರಾದಿ ಅಷ್ಟದಿನಕ್ಕೆ ಹಿಂದಿನ ವರುಷ ಪೂರ್ತಿಯಾಗುತ್ತದೆಂದು ತಿಳಿದುಕೊಳ್ಳಬೇಕು. ತಿಥಿ ಶುದ್ಧಿಯಲ್ಲಿ ದಿನಸಂಖ್ಯೆಯಲ್ಲಿ ೨೦ ರ ಮೇಲೆ ೩೦ ವರಿಗೂ ಯಾವ ವರುಷ ಬರುತ್ತದೋ ಆ ಸಂವತ್ಸರ ಅಧಿಕ ಹುಟ್ಟುತ್ತದೆಂದು ತಿಳಿದುಕೊಳ್ಳಬೇಕು. ತಿಥಿ ಧೃವವೆಂದರೆ ಸೌರವರ್ಷ ಪ್ರಾರಂಭ ದಿನವೆಂದು ತಿಳಿಯಬೇಕು. ಆ ದಿವಸವೇ ತಿಥಿ ೧ ನೇ ಪದಕವಾಗಿ ತಿಳಿಯಬೇಕು. ಈ ಸಿದ್ಧಾಂತರೀತ್ಯಾ—ಚೈತ್ರ ಶು| ೧ ಕ್ಕೆ ಮಾಡಿಕೊಳ್ಳಬೇಕೆಂದರೆ ಆಗಲಾರದು. ಹಿಂದಿನವರುಷ ಮಾಡಿದ ಗಣಿತದಲ್ಲೇ ಚೈತ್ರ ಶುದ್ಧ೧ ಬಂದುಹೋಗುತ್ತದೆ. ಹ್ಯಾಗಂದರೆ ಚೈತ್ರಮಾಸದಲ್ಲಿ ಮೇಷ ಸಂಕ್ರಾಂತಿವರಿಗೂ ಗತ ಸಂವತ್ಸರದ ಗಣಿತ ಸಿದ್ಧವಾಗಿರುತ್ತದೆ. ಮುಂದಿನ ವರುಷ ಮುಂದಿನ ಧೃವಕದಿಂದ ನೋಡಿಕೊಳ್ಳಬೇಕು. ನಕ್ಷತ್ರ ಧೃವಕವೆಂದರೆ ಸಾರವರುಷ ಪ್ರಾರಂಭದಿನದ ನಕ್ಷತ್ರವೆಂದು ತಿಳಿಯಬೇಕು. ನಕ್ಷತ್ರ ಧೃವ ಮೊದಲನೇ ಅಂಕಿಯಲ್ಲಿ ಎಷ್ಟುಸಂಖ್ಯೆ ಇರುತ್ತದೊ ಅಷ್ಟನೇ ನಕ್ಷತ್ರ, ಅಷ್ಟನೇ ಯೋಗ ನಮ್ಮ ಗಣಿತ ಪ್ರಾರಂಭದಿನದ ವಾರಕ್ಕೆ ಗಣಿತ ಬರುತ್ತದೆ. ತಿಥಿ ಯೋಗಗಳಿಗೆ ಶೂನ್ಯ ಪದಕ ಮೊದಲಾಗಿ ಕ್ರಮವಾಗಿ ಸಂವತ್ಸರಾಂತ್ಯದವರೆಗೂ ಗುಣಿಸಿ ಎಷ್ಟು ಪದಕಕ್ಕೆ ನಿಂತರೆ ಅಷ್ಟೇಸಾಕು. ಮುಂದಿನ ವರುಷಕ್ಕೆ ಹಿಂದೆ ನಿಂತ ಶೇಷ ಪದಕಗಳು ಪ್ರಯೋಜನವಿಲ್ಲಾ; ಅವುಗಳನ್ನು ಬಿಟ್ಟು ಪ್ರಾರಂಭ ಪದಕಗಳಿಂದ ಸಾಧಿಸಬೇಕು. ನಕ್ಷತ್ರಪದಕ ಸಾಧಿಸುವಾಗ್ಯೆ ನಕ್ಷತ್ರ ಸ್ಫಷ್ಟಕೇಂದ್ರ ಮೊದಲನೆ ಅಂಕಿ ಎಷ್ಟು ಸಂಖ್ಯೆ ಬರುತ್ತದೋ ಆ ಸಂಖ್ಯಾ ಸಮಂಧವಾದ ಪದಕವೇ ಶೂನ್ಯ ಪದಕವಾಗಿ ತಿಳಿದು ಅಲ್ಲಿಂದ ಚಾಲ್ತಿ ಕ್ರಮವಾಗಿ ಸಂವತ್ಸರಾಂತ್ಯದ ವರಿಗೂ ನೋಡಿಕೊಳ್ಳಬೇಕು. ಇದು ಒಂದು ಪ್ರಕಾರ ಇರುತ್ತದೆ. ಚೈತ್ರ ಶು| ೧ ಕ್ಕೆ ತಿಥಿ ಪದಕವನ್ನು ಮಾಡಿಕೊಳ್ಳಬೇಕಾದರೆ ೩೬೦ ದಿನಗಳನ್ನು ಇಟ್ಟುಕೊಂಡು ಹಿಂದಿನ ಸಂವತ್ಸರ ಅಧಿಕ ಬಂದುಯಿದ್ದರೆ, ೩೯೦ ದಿನಗಳನ್ನು ಇಟ್ಟುಕೊಂಡು ಹಿಂದಿನ ಸಂವತ್ಸರದ ತಿಥಿ ಧೃವಕಿಯ ದಿನಗಳನ್ನು ತೆಗೆದುಹಾಕಿ ಅದರಲ್ಲಿ ೧ ಸಂಖ್ಯೆಯನ್ನು ಕೂಡಿಸಿದರೆ ಚೈತ್ರ ಶು| ೧ ಕ್ಕೆ ತಿಥಿ ಪದಕವಾಗುತ್ತದೆ. ಇದೇ ಪ್ರಕಾರ ನಕ್ಷತ್ರ.ಯೋಗಕ್ಕೂ ಪದಕಗಳನ್ನು ಮಾಡಿಕೊಂಡು ಹೊಸ ಸಂವತ್ಸರ ಪ್ರಾರಂಭ ದಿನದ ವರಿಗೂ ಗತ ಸಂವತ್ಸರದ ತಿಥ್ಯಾದಿ ಕೇಂದ್ರ ಭೋಗಗಳನ್ನುಪಯೋಗಿಸಿಕೊಂಡು ತಿಥ್ಯಾದಿಗಳನ್ನು ಸಾಧಿಸಿಕೊಳ್ಳಬೇಕು. ಅನಂತರ ಹೊಸ ಸಂವತ್ಸರದ ಪ್ರಾರಂಭ ದಿನದ ತಿಥಿ ಪದಕವನ್ನು ಸಾಧಿಸಿಕೊಳ್ಳಬೇಕು.

CC-0. Jangamwadi Math Collection. Digitized by eGangotri

ಹೊಸ ಸಂವತ್ಸರದ ಪ್ರಾರಂಭ ದಿನದ ಪದಕವನ್ನು ಮಾಡುವಕ್ರಮ.

ಹೊಸ ಸಂವತ್ಸರದ ತಿಥಿ ಧ್ರುವಕಿಯಲ್ಲಿ ಎಷ್ಟು ದಿನಗಳು ಬಂದಿರುತ್ತವೋ ಚೈತ್ರ ಶುಕ್ಲ ಪ್ರತಿಪದಾದಿ ದಿನದಿಂದ ಅಷ್ಟು ತಿಥಿಗಳ ಮೇಲೆ ಹೊಸ ಸಂವತ್ಸರದ ಪ್ರಾರಂಭ ದಿನವೆಂದು ತಿಳಿದುಕೊಂಡು ಹೊಸ ಸಂವತ್ಸರ ಪ್ರಾರಂಭದಿನಕ್ಕೆ ಚೈತ್ರ ಶುಕ್ಲ ಪ್ರತಿಪದಾದಿ ಗತ ತಿಥಿಗಳಲ್ಲಿ ಹೊಸ ಸಂವತ್ಸರಕ್ಕೆ ಮಾಡಿಕೊಂಡ ತಿಥಿ ಧ್ರುವಕಿಯ ದಿನಗಳನ್ನು ಕಳೆಯಬೇಕು. ಮಿಕ್ಕ ಸಂಖ್ಯೆಯೇ ಸಂವತ್ಸರದ ಪ್ರಾರಂಭ ದಿನಕ್ಕೆ ತಿಥಿ ಪದಕ ಸಂಖ್ಯೆಯಾಗುತ್ತದೆ. ತಿಥಿ ಪದಕ ಸಂಖ್ಯೆಯಲ್ಲಿ ತಿಥಿ ಸ್ಫಷ್ಟ ಕೇಂದ್ರ ದಿನಗಳನ್ನು ಕೂಡಿಸಿದರೆ ಪ್ರಾರಂಭ ದಿನದ ತಿಥಿ ಪರಾಖ್ಯ ಪದಕವಾಗುತ್ತದೆ. ಅನಂತರ ಹಿಂದೆ ಹೇಳಿದ ಪ್ರಕಾರ ಪ್ರಾರಂಭದಿನದ ತಿಥಿ ಘಳಿಗೆಗಳನ್ನು ಮಾಡಿಕೊಳ್ಳಬೇಕು. ಮರುದಿವಸ ತಿಥಿ ಪದಕವನ್ನು ಮಾಡಿಕೊಳ್ಳಬೇಕಾದರೆ, ಕ್ರಮವಾಗಿ ಒಂದೊಂದು ಸಂಖ್ಯೆಯನ್ನು ಹೆಚ್ಚು ಮಾಡಿಕೊಳ್ಳುತ್ತಾ ಸಂವತ್ಸರಾಂತ್ಯದ ವರೆಗೂ ತಿಥಿಪದಕ ಪರಾಖ್ಯಪದಕವನ್ನು ಒಂದೊಂದು ಹೆಚ್ಚುಮಾಡಿಕೊಳ್ಳುತ್ತಾ ತಿಥ್ಯಾದಿ ಘಳಿಗೆಗಳನ್ನು ಸಾಧಿಸಿಕೊಳ್ಳಬೇಕು.

ಉದಾಹರಣೆ.

